ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793

KANNADA DAILY NEWS PAPER
ಕನ್ನಡ ದಿನಪತ್ರಿಕೆ

DAIRYADA DAARI
RNI NO: KNKAN/25/A2795

EMAIL : dairyadadaari@gmail.com
ಸಂಪುಟ: 01 ಸಂಚಿಕೆ: 182
ಬೆಲೆ ರೂ : 2.00
ರಾಯಚೂರು
ಪುಟ: 4
ಶನಿವಾರ: 27-06-2026

## ಡಿಕೆಶಿ ಜೊತೆ ವ್ಯವಹಾರಿಕ ಸಂಬಂಧವಿಲ್ಲ: ಬಿವೈವಿ

**ಬೆಂಗಳೂರು, ಜೂ. 26–** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನನ್ನ ಮಧ್ಯೆ ಯಾವುದೇ ವ್ಯವಹಾರಿಕ ಸಂಬಂಧ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಪಷ್ಟಪಡಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಇಂದು ಭೇಟಿ ನೀಡಿ ಶ್ರೀ ಮಂಜುನಾಥ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ನನ್ನ ನಡುವೆ ಯಾವುದೇ ಆತ್ಮೀಯತೆಯಾಗಲೀ, ವ್ಯವಹಾರಿಕ ಸಂಬಂಧವಾಗಲೀ ಇಲ್ಲ. ಕೆಪಿಸಿಸಿ ಅಧ್ಯಕ್ಷರಿಗೆ ಕೊಡಬೇಕಾದ ಗೌರವ ಕೊಟ್ಟಿದ್ದೇನೆ. ಹಾಗೆಯೇ ಒಬ್ಬ ಶಾಸಕನಾಗಿ ರಾಜ್ಯದ ಮುಖ್ಯಮಂತ್ರಿಗೆ ಕೊಡಬೇಕಾದ ಗೌರವವನ್ನು ಕೊಟ್ಟಿದ್ದೇನೆ ಅಷ್ಟೇ ಎಂದು ಹೇಳಿದರು.



ನನ್ನ ಮತ್ತು ಡಿ.ಕೆ. ಶಿವಕುಮಾರ್ ನಡುವೆ ವ್ಯವಹಾರಿಕ ಸಂಬಂಧ, ಆತ್ಮೀಯತೆ ಇದೆ ಎಂದು ಸಾಕಷ್ಟು ಅಪಪ್ರಚಾರ ನಡೆದಿದೆ ಎಂದು ಬೇಸರ ವ್ಯಕ್ತಪಡಿಸಿದ ಅವರು, ಎಲ್ಲೋ ಒಂದು ಕಡೆ ನಾನೇ ಅಡ್ಡ ಮತದಾನಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ ಎಂಬ ಆರೋಪಗಳು ಸಾಮಾಜಿಕ ಜಾಲತಾಣ, ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ಈ ಚರ್ಚೆಗೆ ನಮ್ಮವರೇ ಕಾರಣ ಎಂಬುದು ನನಗೆ ಗೊತ್ತಿದೆ ಎಂದರು.

ಬಿಜೆಪಿ ಪಕ್ಷದ ರಾಜ್ಯಾಧ್ಯಕ್ಷನಾಗಿ ಇಂತಹ ಕೀಳುಮಟ್ಟದ ಕೆಲಸ ಮಾಡುವ ಪ್ರಶ್ನೆ ಉದ್ಭವಿಸಲ್ಲ. ನಾನು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ಹಿರಿಯರ ಆಶೀರ್ವಾದದಿಂದ ಕೆಲಸ ಮಾಡುತ್ತಿದ್ದೇನೆ ಎಂದರು.

ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಇಬ್ಬರು ಅಭ್ಯರ್ಥಿಗಳು ಜಯಶಾಲಿಯಾಗಿದ್ದಾರೆ. ಚುನಾವಣೆಯಲ್ಲಿ ಅಡ್ಡಮತದಾನವಾಗಿರುವುದು ನಾನು ಸೇರಿದಂತೆ ಲಕ್ಷಾಂತರ ಕಾರ್ಯಕರ್ತರಿಗೆ ನೋವು ತಂದಿದೆ. ಶಾಸಕರ ಅಡ್ಡ ಮತದಾನವು ಬೇರೆ ರೀತಿಯ ಚರ್ಚೆಗಳಿಗೆ ಕಾರಣವಾಗಿದೆ. ನನ್ನ ಬಗ್ಗೆ ಅಪಪ್ರಚಾರಗಳು ನಡೆಯುತ್ತಿವೆ ಎಂದು ನೋವಿನಿಂದ ಹೇಳಿದರು.

ಪರಿಷತ್ ಚುನಾವಣೆಯಲ್ಲಿ ನಾನೇ ಅಡ್ಡಮತದಾನ ಮಾಡಿದ್ದೇನೆ ಎಂಬ ಆರೋಪಗಳು ಸಂಪೂರ್ಣ ಸುಳ್ಳು ಎಂದು ಅವರು ಹೇಳಿದರು.ಎಸ್.ಟಿ ಸೋಮಶೇಖರ್ ಅವರು ನಮ್ಮ ಪಕ್ಷದ ಮೂವರು ಶಾಸಕರ ಜೊತೆ ಸಂಪರ್ಕ ಮಾಹಿತಿ ಇದೆ. ಯಾರನ್ನೂ ರಕ್ಷಿಸುವ ಮಾತೇ ಇಲ್ಲ. ಸತ್ಯ ಏನು ಎಂದು ಮುಂದಿನ ದಿನಗಳಲ್ಲಿ ತಿಳಿಯಲಿದೆ ಎಂದರು.

ಅಡ್ಡಮತದಾನದಲ್ಲಿ ಡಿ.ಕೆ ಶಿವಕುಮಾರ್ ಅವರ ಪಾತ್ರ ಇದೆಯೋ ಇಲ್ಲವೊ ಗೊತ್ತಿಲ್ಲ. ನಮ್ಮ ಶಾಸಕರಂತೂ ಸ್ವಯಂಪ್ರೇರಿತವಾಗಿ ಯಾರೂ ಅಡ್ಡ ಮತದಾನ ಮಾಡಿಲ್ಲ. ಯಾರೇ ಷಡ್ಯಂತ್ರ ಮಾಡಿದ್ದರೂ ತಿಳಿಯಲಿದೆ ಎಂದು ಹೇಳಿದರು. ಡಿ.ಕೆ.ಶಿವಕುಮಾರ್ ಅವರು ಬಹುಮುಖ ಪ್ರತಿಭೆಯ ಸಿಎಂ. ಅವರು ಯಾರದೇ ಮನೆಗೆ ಬಂದರೂ ಅವರ ಮನೆಯವರೇ ಎಂದು ಅನಿಸುತ್ತದೆ ಎಂದರು

ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನನಗೆ ನೋವು ತಂದಿತು. ನಾನು ಭಾವನಾತ್ಮಕ ವ್ಯಕ್ತಿಯಾದ್ದರಿಂದ ಸತ್ಯಾಸತ್ಯತೆ ಹೊರ ಬರಲಿ ಎಂದು ಧರ್ಮಸ್ಥಳದಲ್ಲಿ ಆಣೆ, ಪ್ರಮಾಣದ ಮಾತುಗಳನ್ನಾಡಿದ್ದೆ. ಆದರೆ ಪಕ್ಷದ ಹಿರಿಯರು ನಮ್ಮಲ್ಲೇ ಇದನ್ನು ಬಗೆಹರಿಸಿಕೊಳ್ಳೋಣ ಎಂದಿದ್ದರಿಂದ ಈ ನಿರ್ಧಾರದಿಂದ ಹಿಂದೆ ಸರಿದೆ. ಈಗ ದೇವರ ದರ್ಶನಕ್ಕೆ ಬಂದಿದ್ದೇನೆ ಎಂದು ಅವರು ಹೇಳಿದರು.

ನನ್ನ ವಿರುದ್ಧ ಅಪಪ್ರಚಾರ ಮಾಡುತ್ತಿರುವವರಿಗೆ ದೇವರು ಒಳ್ಳೆಯದು ಮಾಡಲಿ. ನಾನಂತೂ ಪಕ್ಷ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದೇನೆ ಎಂದು ವಿಜಯೇಂದ್ರ ಭಾವುಕರಾಗಿ ಹೇಳಿದರು. ರಾಜ್ಯದಲ್ಲಿ ಭೀಕರ ಬರಗಾಲದ ಪರಿಸ್ಥಿತಿ ಕಾಣುತ್ತಿದೆ. ಮಳೆ ಸಮರ್ಪಕವಾಗಿ ಆಗಿ ರೈತನ ಬದುಕು ಹಸನಾಗಬೇಕು. ರೈತನ ಬೆಳೆಗೆ ವೈಜ್ಞಾನಿಕ ಬೆಲೆ ಸಿಗಬೇಕು.

ರೈತರು ಹಾಗೂ ನಾಡಿನ ಜನತೆಗೆ ಒಳ್ಳೆಯದಾಗಲಿ. ಮುಂದಿನ ಚುನಾವಣೆಯಲ್ಲಿ ನಮ್ಮೆಲ್ಲರ ನೇತೃತ್ವದಲ್ಲಿ ಒಂದು ಜನಪರ ಸರ್ಕಾರ ಅಧಿಕಾರಕ್ಕೆ ಬರಲಿ, ಹಿಂದೂಗಳನ್ನು ರಕ್ಷಣೆ ಮಾಡುವ, ರಾಜ್ಯದ ಸರ್ವತೋಮುಖ ಅಭಿವೃದ್ಧಿ ಮಾಡುವ ಒಳ್ಳೆಯ ಸರ್ಕಾರ ಬರಲಿ ಎಂದು ಮಂಜುನಾಥಸ್ವಾಮಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದು ಅವರು ಹೇಳಿದರು.

## ಅಭಿನವ ಶ್ರೀಗಳಿಗೆ ಜನ್ಮವರ್ದಂತಿ ಮುಖಂಡರಿಂದ ಶುಭಾಷಯ.



ಧೈರ್ಯದ ದಾರಿ

ಸಿರವಾರ.ಜೂ.26– ತಾಲೂಕಿನ ನವಲಕಲ್ ಗ್ರಾಮದ ಐತಿಹಾಸಿಕ ಸುಪ್ರಸಿದ್ದ ಮಠವಾದ ಮಯೂರಶಿಲೆ ಮಹಾ ಸಂಸ್ಥಾನ ಬೃಹನ್ಮಠದ ಮಠಾಧಿಪತಿಗಳಾದ ಷ"ಬ್ರ" ಅಭಿನವ ಸೋಮನಾಥ ಶಿವಾಚಾರ್ಯ ಮಹಾಸ್ವಾಮಿಗಳ 35ನೇ ವರ್ಷದ ಜನ್ಮವರ್ಧಂತಿಗೆ ಅಂಗವಾಗಿ ವಿವಿಧ ಮಠಾಧಿಶರು, ರಾಜಕೀಯ ಮುಖಂಡರು. ಶ್ರೀಮಠಕ್ಕೆ ತೆರಳಿ ಶುಭಾಷಯ ತಿಳಿಸಿದರು. ಈ ಸಂದರ್ಭದಲ್ಲಿ ಯುವ ಮುಖಂಡರಾದ ರಮೇಶದರ್ಶನಕರ್, ಶಿವಶರಣಸಾಹುಕಾರ ಅರಕೇರಿ, ರವಿರಾಜ ಕಳಸ,ಆದೇಪ್ಪ, ಅಮರೇಶ ಹಡಪದ್, ಶರಣಪ್ಪ, ಅಮರೇಶ ಸೇರಿದಂತೆ ಇನ್ನಿತರರು ಇದರು.

ಸುದ್ದಿ ಮತ್ತು
ಜಾಹೀರಾತಿಗಾಗಿ ಸಂಪರ್ಕಿಸಿ
6360866626

## ಮೊಹರಂ ಅಂಗವಾಗಿ ಶರ್ಬತ್ ವಿತರಣೆ: ಅಹಲ್ಯೆ ಸುನ್ನತ್ ಜಮಾತ್ ಸೇವೆಗೆ ಸಾರ್ವಜನಿಕರ ಮೆಚ್ಚುಗೆ

ಧೈರ್ಯದ ದಾರಿ

**ಮಾನ್ವಿ, ಜೂ. 27:** ಪ್ರತಿವರ್ಷದಂತೆ ಈ ವರ್ಷವೂ ಮೊಹರಂ ಹಬ್ಬದ ಪ್ರಯುಕ್ತ ಪಟ್ಟಣದ ಬಸ್ ನಿಲ್ದಾಣ ಆವರಣದಲ್ಲಿ ಅಹಲ್ಯೆ ಸುನ್ನತ್ ಜಮಾತ್ ವತಿಯಿಂದ ಸಾರ್ವಜನಿಕರಿಗೆ ಶರ್ಬತ್ ಹಾಗೂ ಕುಡಿಯುವ ನೀರನ್ನು ವಿತರಿಸುವ ಸೇವಾ ಕಾರ್ಯಕ್ರಮ ನಡೆಯಿತು.

ಮೊಹರಂ ಸಂದರ್ಭದಲ್ಲಿ ಬಾಯಾರಿದ ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ಶರ್ಬತ್ ಮತ್ತು ನೀರು ವಿತರಿಸುವುದು ಉತ್ತಮ ಸಂಪ್ರದಾಯವಾಗಿದ್ದು, ಇದು ಸಾಮಾಜಿಕ ಸಾಮರಸ್ಯ, ಮಾನವೀಯತೆ ಹಾಗೂ ಸಹಬಾಳ್ವೆಯ ಸಂದೇಶವನ್ನು ಸಾರುವ ಸೇವಾ ಕಾರ್ಯವಾಗಿದೆ. ಬೇಸಿಗೆಯ ದಾಹ ನೀಗಿಸುವ ಈ ಸೇವೆಯಿಂದ ನೂರಾರು ಸಾರ್ವಜನಿಕರು ಪ್ರಯೋಜನ ಪಡೆದರು.

ಕಾರ್ಯಕ್ರಮದಲ್ಲಿ ಧರ್ಮಗುರು ಸೈಯದ್ ಸಜ್ಜದ್ ಹುಸೇನಿ ಮತವಾಲೆ ಅವರು ಫಾತಿಹಾ ಪಠಿಸಿ ಮಾತನಾಡಿ, ಹಜರತ್ ಇಮಾಮ್ ಹಸನ್ ಹಾಗೂ ಹಜರತ್ ಇಮಾಮ್ ಹುಸೇನ್ (ಅ.) ಅವರ ತ್ಯಾಗ, ಬಲಿದಾನ ಮತ್ತು ಸತ್ಯದ ಮಾರ್ಗದ ಕುರಿತು ವಿವರಿಸಿದರು.

ಕರ್ಬಲಾ ಮೈದಾನದಲ್ಲಿ ಇಮಾಮ್ ಹುಸೇನ್ ಅವರು ಸತ್ಯ, ನ್ಯಾಯ ಹಾಗೂ ಧರ್ಮದ ರಕ್ಷಣೆಗಾಗಿ ತಮ್ಮ ಕುಟುಂಬ ಸಮೇತ ಶಹೀದ್ ಆದ ಘಟನೆ ಇಸ್ಲಾಂ ಇತಿಹಾಸದಲ್ಲಿ ಅತ್ಯುನ್ನತ ತ್ಯಾಗದ ಸಂಕೇತವಾಗಿದೆ. ಇಸ್ಲಾಂ ಸಂಪ್ರದಾಯದಲ್ಲಿ ಹಜರತ್ ಇಮಾಮ್ ಹಸನ್ ಮತ್ತು ಹಜರತ್ ಇಮಾಮ್ ಹುಸೇನ್ ಅವರನ್ನು "ಸಯ್ಯಿದು ಶಬಾಬಿ ಅಹ್ಲಿಲ್ ಜನ್ನಾಹ್" (ಸ್ವರ್ಗದ ಯುವಜನರ ಸರದಾರರು) ಎಂದು ಗೌರವಿಸಲಾಗುತ್ತದೆ ಎಂದು ಅವರು ತಿಳಿಸಿದರು. ಅವರ ತ್ಯಾಗ, ಸಹನೆ, ಧೈರ್ಯ ಹಾಗೂ ಅನ್ಯಾಯದ ವಿರುದ್ಧ ಹೋರಾಡಿದ ಆದರ್ಶ ಇಂದಿನ ಯುವಜನತೆಗೆ ದಾರಿದೀಪವಾಗಿದ್ದು, ಕರ್ಬಲಾ ಸಂದೇಶವು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಹಾಗೂ ಸತ್ಯದ ಪರವಾಗಿ ನಿಲ್ಲಲು ಸದಾ ಪ್ರೇರಣೆಯಾಗಿದೆ ಎಂದು ಹೇಳಿದರು.









ಮಾನ್ವಿ ಪಟ್ಟಣದ ಬಸ್ ನಿಲ್ದಾಣದಲ್ಲಿ ಮೊಹರಂ ಅಂಗವಾಗಿ ಅಹಲ್ಯೆ ಸುನ್ನತ್ ಜಮಾತ್ ವತಿಯಿಂದ ಸಾರ್ವಜನಿಕರಿಗೆ ಶರ್ಬತ್ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಧರ್ಮಗುರುಗಳು, ಗಣ್ಯರು ಹಾಗೂ ಜಮಾತ್ ಮುಖಂಡರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಸೈಯದ್ ಮಿನಲ್ಲ ಹುಸೇನಿ ಮತವಾಲೆ, ಸೈಯದ್ ಹಬೀಬ್ ಹುಸೇನಿ ಮತವಾಲೆ, ಸೈಯದ್ ಅಕ್ಬರ್ ಹುಸೇನಿ ಮತವಾಲೆ, ಮಾಜಿ ಪುರಸಭೆ ಅಧ್ಯಕ್ಷ ಸೈಯದ್ ನಜರುದ್ದೀನ್ ಖಾದ್ರಿ, ಸೈಯದ್ ಯಾದುಲ್ಲಾ ಹುಸೇನಿ ಮತವಾಲೆ, ಸೈಯದ್ ಆರಿಫ್ ಖಾದ್ರಿ ಜಾಗೀರ್ದಾರ್, ಸೈಯದ್ ಅಮ್ಜದ್ ಖಾದ್ರಿ ಜಾಗೀರ್ದಾರ್, ಮಾಜಿ ಪುರಸಭೆ ಅಧ್ಯಕ್ಷ ಇಸ್ಮಾಯಿಲ್ ಸಾಬ್, ಸೈಯದ್ ಮಕ್ಬುಲ್, ಆದಿಲ್ ರಶೀದ್, ಸೈಯದ್ ಸಲ್ಮಾನ್ ಯಮುನಿ, ಮಹೆಬೂಬ್ ಖಾನ್ ಸಾಬ್, ಶಕ್ಷ ವಲಿ ಸೇರಿದಂತೆ ಅಹಲ್ಯೆ ಸುನ್ನತ್ ಜಮಾತ್‌ನ ಮುಖಂಡರು ಹಾಗೂ ಅನೇಕ ಭಕ್ತರು ಉಪಸ್ಥಿತರಿದ್ದರು.

## ಓಂ ಸಾಯಿ ಧ್ಯಾನ ಮಂದಿರದಲ್ಲಿ ಎಸ್‌ಐಆರ್ ಕಾರ್ಯಕ್ರಮ ಕುರಿತು ಮಾಹಿತಿ

ಧೈರ್ಯದ ದಾರಿ




**ರಾಯಚೂರು** :ನಗರದ ಸಾರ್ವಜನಿಕ ಗ್ರಂಥಾಲಯ ಹತ್ತಿರವಿರುವ ಓಂ ಸಾಯಿ ಮಂದಿರದಲ್ಲಿ ಜಿಲ್ಲಾಡಳಿತ. ಜಿಲ್ಲಾ ಪಂಚಾಯತ್ ಸ್ವಿಪ್ ಸಮಿತಿ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ ಮಾಹಿತಿಯ ಕಾರ್ಯಕ್ರಮ ಜರಗಿತು. ಮತದಾರರ ಸಾಕ್ಷರತಾ ಕ್ಲಬ್ ಹಾಗೂ ಎಸ್‌ಐಆರ್ ಕಾರ್ಯಕ್ರಮ ಸಂಯೋಜನೆ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಮಾತನಾಡುತ್ತಾ. ಈ ಕಾರ್ಯಕ್ರಮವನ್ನು ಈಗಾಗಲೇ ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ತಾಲೂಕ್ ಆಡಳಿತ ತಾಲೂಕು ಪಂಚಾಯತ್ ಸ್ವೀಪ ಸಮಿತಿ ರಾಯಚೂರು ಎಲ್ಲಾ ಬಿ.ಎಲ್.ಓ ವರಿಗೆ ಉತ್ತಮವಾದ ರೀತಿಯಲ್ಲಿ ತರಬೇತಿಯನ್ನು ನೀಡಿ ಗೊಂದಲ ರಹಿತ ಮತ್ತು ಸ್ಪಷ್ಟ ಮತದಾರ ಪಟ್ಟಿಯ ತಯಾರಿಸುವ ಹಿನ್ನೆಲೆಯಲ್ಲಿ ಎಸ್‌ಐಆರ್ ಕಾರ್ಯಕ್ರಮವನ್ನು ಜಿಲ್ಲೆಯ ನಡೆಯುತ್ತಿರುವುದರಿಂದ ಪ್ರಭುತ್ವ ಮತದಾರರು ಮತ್ತು ಸಾರ್ವಜನಿಕರು ಚುನಾವಣೆ ಈ ಒಂದು ಕಾರ್ಯಕ್ಕೆ 2ನೇ ಪುಟಕ್ಕೆ

## ದಲಿತ ಸಾಹಿತ್ಯ ಪರಿಷತ್ತು ಮಾನ್ವಿ ತಾಲೂಕ ಘಟಕದ ಪದಾಧಿಕಾರಿಗಳ ನೇಮಕ

ಧೈರ್ಯದ ದಾರಿ



**ಮಾನ್ವಿ:** ಪಟ್ಟಣದ ಪ್ರವಾಸಿ ಮಂದಿರದಲ್ಲಿ ದಲಿತ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷರಾದ ರಾಮು ಹೊಳೆಯಪ್ಪನವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಸಮಿತಿ ಆದೇಶ ಮೇರೆಗೆ ತಾಲೂಕು ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪ್ರಧಾನ ಕಾರ್ಯದರ್ಶಿಯಾಗಿ ಗೋಪಾಲ ಬಡಿಗೇರ್, ಉಪಾಧ್ಯಕ್ಷರಾಗಿ ಸಬ್ಜಲಿ ಸಾಬ್, ಡಾ.ಬಸವರಾಜ ಸುಂಕೇಶ್ವರ ಖಜಾಂಚಿಯಾಗಿ ಡಾ. ಬಸವರಾಜ ಕರಡಿಗುಡ್ಡ ನಿರ್ದೇಶಕರಾಗಿ ಲಕ್ಷ್ಮಣ ಜಾನೇಕಲ್, ಯಲ್ಲಪ್ಪ ಬೋವಿ, ಚಂದ್ರು ಹೂಗಾರ, ಮಹಾದೇವಪ್ಪ, ಸಾಹಿತ್ಯ ಸಲಹೆಗಾರರಾಗಿ ಡಾ.ಚನ್ನಬಸವ ಮಾಡಗಿರಿ ಮುದ್ರಣ ಸಲಹೆಗಾರರಾಗಿ ಹಿರಿಯ ಪತ್ರಕರ್ತರಾದ ಪಿ.ಪರಮೇಶ, ಮಾಧ್ಯಮ ಸಲಹೆಗಾರರಾಗಿ ಸಂಪಾದಕ ಲಕ್ಷಣರಾವ್ ಕಪಗಲ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ನರಸಿಂಹ ನಾಯಕ, ಸುನೀಲ್ ಹೆಳವರ, ಬಸವರಾಜ ಭಜಂತ್ರಿ, ಹರ್ಷವರ್ಧನ, ಶಿವಪ್ಪ ಜಾಧವ್, ನಾರಾಯಣ, ನರಸಿಂಹ ಸಿ.ಎಂ, ವೈ. ಶ್ರೀನಿವಾಸ್ ಇವರನ್ನು ಆಯ್ಕೆ ಮಾಡಿ ಜಿಲ್ಲಾ ಸಮಿತಿಗೆ ಕಳಿಸಿಕೊಡಲಾಯಿತು.

ಮೊದಲನೇ ಪುಟದಿಂದ

# ಓಂ ಸಾಯಿ ಧ್ಯಾನ ಮಂದಿರದಲ್ಲಿ ಎಸ್ಐಆರ್ ಕಾರ್ಯಕ್ರಮ ಕುರಿತು ಮಾಹಿತಿ

ಕೈಜೋಡಿಸಿ ತಮ್ಮ ಮನೆಗೆ ಬಂದ ಬಿ ಎಲ್ ಓ ಅವರವರಿಗೆ ಉತ್ತಮವಾದ ಮಾಹಿತಿಯನ್ನು ಕೊಟ್ಟು ಇಡೀ ರಾಜ್ಯದಲ್ಲಿಯೇ ಮಾದರಿಯ ಎಸ್.ಐ.ಆರ್ ಕಾರ್ಯಕ್ರಮಕ್ಕೆ ನಾವುಗಳು ಸಹಕಾರ ಕೈಜೋಡಿಸೋಣ ಜೊತೆಗೆ ಗೊಂದಲ ರಹಿತ ಸ್ಪಷ್ಟ ಶುದ್ಧ ಮಾದರಿಯ ಮತದಾರ ಪಟ್ಟಿ ತಯಾರಿಸುವುದರ ಮೂಲಕ ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸೋಣ. ಮನುಷಿರಿಗೆ ಹಕ್ಕು ಎಷ್ಟು ಮುಖ್ಯವೋ ಮತದಾನ ಮಾಡುವುದು ನಮ್ಮ ಕರ್ತವ್ಯ ಹೌದು. ಆ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವ ಆಡಳಿತವನ್ನು ಬಲಪಡಿಸಲು ಮತದಾರರ ಮತದಾನದ ಪಟ್ಟಿಯಲ್ಲಿ ಹೆಸರು ಸೇರಿಸಬೇಕು ಎಂದು ಹೇಳಿದರು.ಡಾ ಬಿರಾದಾರ ಹೇಳಿದರು. ನಂತರ ಓಂ ಸಾಯಿ ಮಂದಿರದ ಸಂಸ್ಥಾಪಕರ ಹಾಗೂ ಮುಖ್ಯಸ್ಥರಾದ ಶ್ರೀ ಸಾಯಿ ಕಿರಣ್ ಆದೋನಿ ಗುರೂಜಿ ಇವರು ಮಾತನಾಡುತ್ತಾ .ನಮ್ಮ ಜಿಲ್ಲೆಯಲ್ಲಿ ಎಸ್.ಐ.ಆರ್ ಕಾರ್ಯಕ್ರಮ ಯಶಸ್ವಿಗೊಳಿಸಲು ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು .ಕಾರಣ ಪ್ರತಿಯೊಬ್ಬ ಬಿ.ಎಲ.ಒಗಳು ಜೂನ್ 30 ರಿಂದ ಮನೆ ಮನೆಗೆ ಭೇಟಿ ಮಾಡುವ ಸಂದರ್ಭದಲ್ಲಿ ಅವರು ಕೇಳಿದ ಮಾಹಿತಿಯನ್ನು ನೀಡಬೇಕು ಡಾ. ಬಿರಾದಾರ ಸರ್ ಇದರ ಬಗ್ಗೆ ಸಂಪೂರ್ಣವಾಗಿ ನಮ್ಮ ಮಂದಿರದ ಸಕಲ ಸದ್ಭಕ್ತರಿಗೆ ಮಾಹಿತಿಯನ್ನು ನೀಡಿ ಉತ್ತಮವಾದ ಕಾರ್ಯವನ್ನು ಮಾಡಿದ್ದಾರೆ .ಅವರ ಈ ಕಾರ್ಯಕ್ಕೆ ನಿಮ್ಮೆಲ್ಲರ ಪರವಾಗಿ ವಿಶೇಷ ಅಭಿನಂದನೆಗಳು .ಎಸ್ಐಆರ್ ಮತದಾರರ ಪಟ್ಟಿಯ ಪರಿಷ್ಕನ್ ಕಾರ್ಯಕ್ರಮಕ್ಕೆ ಸಹಕಾರ ತೋರಿಸಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಖ್ಯಾತ ಚಲನಚಿತ್ರ ನಟರಾದ ಆಶಾಪುರದ .ನರೇಶ್ ಪ್ರಿಯಾಂಕ ಹಾಗೂ ಮಂದಿರದ ಭಕ್ತರು ಉಪಸ್ಥಿತರಿದ್ದರು .ಶುಭಾ ಸಕಲರನ್ನು ಸ್ವಾಗತಿಸಿದರು. ರವಿ ಕಾರ್ಯಕ್ರಮದ ಕೊನೆಯಲ್ಲಿ ವಂದಿಸಿದನು.

# ಸಂಗೀತಕ್ಕೆ ಭಾಷೆಯ ಎಲ್ಲೆಗಳಿಲ್ಲ



**ಕಲಬುರಗಿ,ಜೂ.26–**ಸಂಗೀತಕ್ಕೆ ಯಾವುದೇ ಭಾಷೆ, ಜಾತಿ ಮತ್ತು ಧರ್ಮದ ಎಲ್ಲೆಗಳಿಲ್ಲ. ಇದು ಜನರ ಭಾವನೆಗಳನ್ನು ಬೆಸೆಯುವ ಬಹು ದೊಡ್ಡ ಶಕ್ತಿಯುತ ಮಾಧ್ಯಮವಾಗಿದೆ. ಶಾಸ್ತ್ರೀಯ ಸಂಗೀತ ಅಥವಾ ಹಿತವಾದ ಜಾನಪದ ಗೀತೆಗಳನ್ನು ಆಲಿಸುವುದರಿಂದ ನಮ್ಮಲ್ಲಿನ ಮಾನಸಿಕ ಒತ್ತಡ ಕಡಿಮೆಯಾಗುತ್ತದೆ ಮತ್ತು ಏಕಾಗ್ರತೆಯೂ ಹೆಚ್ಚಿಸುತ್ತದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಶ್ರೀದೇವಿ ಸಂಗೀತ ಸಾಹಿತ್ಯ ಸಾಂಸ್ಕೃತಿಕ ಛಾಯಾಚಿತ್ರ ಕಲಾ ಸಂಸ್ಥೆ ವತಿಯಿಂದ ನಗರದ ಕಲಾ ಮಂಡಳದಲ್ಲಿ ಗುರುವಾರ ಹಮ್ಮಿಕೊಂಡ ಜಾನಪದ ಮತ್ತು ಸಾಂಸ್ಕೃತಿಕ ಕಲರವ ಕಾರ್ಯಕ್ರಮ ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಲಾವಿದರ ಸೃಜನಶೀಲತೆಗೆ ನಿರಂತರವಾಗಿ ಪ್ರೋತ್ಸಾಹ ನೀಡಬೇಕಾಗಿದೆ. ಅನೇಕ ಕಲಾವಿದರು ಇಂದು ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆ. ಆದರೂ ಅವರು ಕಲೆಯನ್ನು ಉಳಿಸಿ ಬೆಳೆಸುವಲ್ಲಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

ಹಿರಿಯ ಸಾಹಿತಿ ಡಾ. ಹನುಮಂತರಾವ ದೊಡ್ಡಮನಿ ಮಾತನಾಡಿ, ಜಾನಪದ ಸಾಹಿತ್ಯವು ಕೇವಲ ಜನಪದರ ಕಥೆಯಷ್ಟೇ ಅಲ್ಲ, ಅದು ಇಡೀ ಕನ್ನಡ ಭಾಷೆ ಮತ್ತು ಶಿಷ್ಟ ಸಾಹಿತ್ಯದ ತಾಯಿ ಬೇರು ಆಗಿದೆ? ಬಾಯಿಯಿಂದ ಬಾಯಿಗೆ ಹರಿದುಬಂದ ಈ ಮೌಖಿಕ ಪರಂಪರೆ, ಕನ್ನಡ ಸಂಸ್ಕೃತಿಯ ಜೀವನಾಡಿಯಾಗಿದೆ ಎಂದು ಮಾರ್ಮಿಕವಾಗಿ ಹೇಳಿದರು.

ರಾಜ್ಯ ಯುವ ಪ್ರಶಸ್ತಿ ಪುರಸ್ಕೃತ ಬಸವರಾಜ ತೋಟದ ಮಾತನಾಡಿ, ಕಲಾವಿದರಿಗೆ ಅವಕಾಶ ಕೊಡುವ ಮೂಲಕ ಅವರನ್ನು ಪ್ರೋತ್ಸಾಹಿಸುವ ಕಾರ್ಯ ಮಾಡಲಾಗುತ್ತಿದೆ. ಕಲೆ ಮತ್ತು ಕಲಾವಿದರನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳು ನಿರಂತರವಾಗಿ ಆಯೋಜಿಸಲಾಗುತ್ತಿದೆ ಎಂದರು.

ಹಿರಿಯ ಪತ್ರಕರ್ತ ದೇವೇಂದ್ರಪ್ಪ ಕಪನೂರ, ಹೋರಾಟಗಾರ ದತ್ತು ಭಾಸಗಿ, ಮಲ್ಲಿಕಾರ್ಜುನ ಮಾತನಾಡಿದರು. ಸಂಸ್ಥೆ ಅಧ್ಯಕ್ಷ ಶರಣಪ್ಪ ಶಿಂಪಿ ಅಧ್ಯಕ್ಷತೆ ವಹಿಸಿದ್ದರು.

ಜಾನಪದ ಮತ್ತು ಸಾಂಸ್ಕೃತಿಕ ಕಲರವ ಕಾರ್ಯಕ್ರಮದಲ್ಲಿ ಸಾದರ ಪಡಿಸಿದ ಕಲಾವಿದರು. ವಿರಗಾಸಿ ಪುರವಂತಿಗೆ. ಶಿವಕುಮಾರ್ ಡಬರಾಬಾದ ತಂಡ. ಶಹನಾಯಿ ಚಂದ್ರಕಾಂತ ಡಿಗ್ಗಿ ತಂಡ. ಜಾನಪದ ಗಾಯನ ಬಸವರಾಜ ಶ್ರೀಂಗೆರಿ ತಂಡ. ಸುಗಮ ಸಂಗೀತ ಸಿದ್ಧಲಿಂಗ ಮಾವೂರ ತಂಡ. ತತ್ವ ಪದ ಗಾಯನ ಮಹಾಂತಪ್ಪ ಕಾಂಬಳೆ ತಂಡ. ಹಂತಿ ಪದ ಮಲ್ಲಪ್ಪ ಎಸ್ ದೊಡ್ಡಿ. ಜಾನಪದ ನೃತ್ಯ ಕು.ಸಾನ್ವಿ ಯನಗುಂಟಿ. ಭರತ ನಾಟ್ಯ ಕು. ಅಕ್ಷತಾ ನಂದೂರ. ವಾದ್ಯ ಸಜಕಾರ ತಬಲಾ ಸಾತ ಶ್ರೀ ಲಕ್ಷ್ಮಣ ಹೇರೂರ. ಹಾರ್ಮೋನಿಯಂ ಸಾತ ಶ್ರೀಧರ ಹೊಸಮನಿ ನೀಡಿದರು.

# ಜಾತಿ ದಬ್ಬಾಳಿಕೆಯ ನೋವನ್ನು ಸಾಹಿತ್ಯದ ಮೂಲಕ ಅನಾವರಣಗೊಳಿಸಿದ ಡಾ. ಸಿದ್ದಲಿಂಗಯ್ಯ: ಡಾ.ಭಜಂತ್ರಿ



**ವಿಜಯಪುರ, ಜೂ.26:** ಜಾತಿ ವ್ಯವಸ್ಥೆಯ ದಬ್ಬಾಳಿಕೆ ಮತ್ತು ಶೋಷಣೆಯ ನೋವನ್ನು ತಮ್ಮ ಸಾಹಿತ್ಯದ ಮೂಲಕ ಪರಿಣಾಮಕಾರಿಯಾಗಿ ಸಮಾಜದ ಮುಂದೆ ತಂದ ಕವಿ ಡಾ. ಸಿದ್ದಲಿಂಗಯ್ಯ ಅವರು ದಲಿತ ಚಳುವಳಿಗೆ ಹೊಸ ಶಕ್ತಿ ತುಂಬಿದ ಮಹತ್ವದ ಸಾಹಿತ್ಯಿಕರಾಗಿದ್ದರು ಎಂದು ಧಾರವಾಡದ ಸಾಹಿತಿ ಡಾ. ವಾಯ್.ಎಂ. ಭಜಂತ್ರಿ ಅಭಿಪ್ರಾಯಪಟ್ಟರು.

ನಗರದ ಬಿ.ಎಲ್.ಡಿ.ಇ. ಸಂಸ್ಥೆಯ ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದಲ್ಲಿ ದಲಿತ ಸಾಹಿತ್ಯ ಪರಿಷತ್ತು ರಾಜ್ಯ ಘಟಕ ಗದಗ, ವಿಭಾಗೀಯ ಘಟಕ ಬೆಳಗಾವಿ ಹಾಗೂ ಜಿಲ್ಲಾ ಘಟಕ ವಿಜಯಪುರ ಇವರ ಸಹಯೋಗದಲ್ಲಿ ಆಯೋಜಿಸಿದ್ದ ದಲಿತ ಕವಿ ಡಾ. ಸಿದ್ದಲಿಂಗಯ್ಯ ಅವರ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ ಮಾತನಾಡಿದ ಅವರು, ಸಿದ್ದಲಿಂಗಯ್ಯ ಅವರ ಸಾಹಿತ್ಯವು ಕೇವಲ ಬರವಣಿಗೆಯಾಗಿರದೆ ಹೋರಾಟದ ಧ್ವನಿಯಾಗಿ ರೂಪುಗೊಂಡು ಸಮಾಜದಲ್ಲಿ ಜಾಗೃತಿ ಮೂಡಿಸಿತು ಎಂದು ಹೇಳಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ದಲಿತ ವಿದ್ಯಾರ್ಥಿ ಪರಿಷತ್ತಿನ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಡಾ. ಸಿದ್ದಲಿಂಗಯ್ಯ ಅವರಂತಹ ಮಹನೀಯರು ಸಮಾಜದಲ್ಲಿ ಗುರುತಿಸಿಕೊಳ್ಳಲು ಸಾವಿತ್ರಿಬಾಯಿ ಫುಲೆ ಮತ್ತು ಮಹಾತ್ಮ ಜ್ಯೋತಿರಾವ್ ಫುಲೆ ಅವರ ಶಿಕ್ಷಣ ಕ್ರಾಂತಿಯೇ ಕಾರಣವಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಇಂತಹ ಮಹಾಪುರುಷರ ಜೀವನ ಮತ್ತು ಹೋರಾಟಗಳಿಂದ ಪ್ರೇರಣೆ ಪಡೆದು ತಮ್ಮ ಬದುಕಿಗೆ ದಾರಿದೀಪವನ್ನಾಗಿಸಿಕೊಳ್ಳಬೇಕು ಎಂಬ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಬಿ.ಎಂ. ಖಾಸನೀಸ್ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸತ್ಯಾನಂದ ಪಾತ್ರೋಟ ಹಾಗೂ ದೊಡ್ಡಣ್ಣ ಭಜಂತ್ರಿ ಉಪಸ್ಥಿತರಿದ್ದರು. ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷ ರವಿ ಕಿತ್ತೂರ, ವಿಭಾಗೀಯ ಸಂಯೋಜಕ ಮೋಹನ ಕಟ್ಟಿಮನಿ, ದಲಿತ ಮುಖಂಡ ಅಭಿಷೇಕ ಚಕ್ರವರ್ತಿ, ಸಾಮಾಜಿಕ ಹೋರಾಟಗಾರ ಪ್ರಭುಗೌಡ ಪಾಟೀಲ ಹಾಗೂ ಚಿತ್ರಕಲಾವಿದ ವಿದ್ಯಾಧರ ಸಾಲಿ ಭಾಗವಹಿಸಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾವುತ ತಳಕೇರಿ ಹೋರಾಟದ ಗೀತೆಗಳನ್ನು ಹಾಡಿ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ನೀಡಿದರು. ಮಹಾವಿದ್ಯಾಲಯದ ಡಾ. ಎಂ.ಬಿ. ಕೋರಿ ಸ್ವಾಗತಿಸಿದರು. ಡಾ. ಸುಭಾಷ ಕೊಣ್ಣೂರ ನಿರೂಪಿಸಿ, ವಂದಿಸಿದರು.

# ಮಾದಕ ವಸ್ತುಗಳ ವಿರುದ್ಧ ಸಮರಕ್ಕೆ ಕೈ ಜೋಡಿಸಿ: ಪೊಲೀಸ್ ಕಮೀಶನರ್ ಡಾ.ಶರಣಪ್ಪ




**ಕಲಬುರಗಿ,ಜೂ.26:**ಮಾದಕ ವಸ್ತುಗಳ ಸೇವನೆ ಮತ್ತು ಮಾರಾಟದ ವಿರುದ್ಧ ಸಮೂಹ ಹೋರಾಟ ಅಗತ್ಯವಾಗಿದ್ದು, ಯುವಜನರು ಈ ದುಶ್ಚಟದಿಂದ ದೂರವಿರುವುದಷ್ಟೇ ಅಲ್ಲ, ಸುತ್ತಮುತ್ತ ಇಂತಹ ಚಟುವಟಿಕೆಗಳು ಕಂಡುಬಂದರೆ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ. ಕರೆ ನೀಡಿದರು.

ಅಂತರರಾಷ್ಟ್ರೀಯ ಮಾದಕ ವಸ್ತು ದುರ್ಬಳಕೆ ಮತ್ತು ಅಕ್ರಮ ಸಾಗಣೆ ವಿರೋಧಿ ದಿನದ ಅಂಗವಾಗಿ ಕಲಬುರಗಿ ನಗರ ಪೊಲೀಸ್ ಹಾಗೂ ಯುನೈಟೆಡ್ ಆಸ್ಪತ್ರೆ ಸಹಯೋಗದಲ್ಲಿ ಗುರುವಾರ ಸಂಜೆ ನಗರದ ಎಸ್ವಿಪಿ ವೃತ್ತದಲ್ಲಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾದಕ ವಸ್ತು ಸರಬರಾಜು ಮಾಡುವವರ ವಿರುದ್ಧ ಮಾತ್ರವಲ್ಲದೆ, ಅವುಗಳನ್ನು ಸೇವಿಸುವವರ ಮೇಲೂ ಎನ್ಡಿಪಿಎಸ್ ಕಾಯ್ದೆಯಡಿ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ ಎಂದ ಅವರು 2025ರ ಜನವರಿಯಿಂದ ಇದುವರೆಗೆ ಕಲಬುರಗಿ ನಗರದಲ್ಲಿ ಮಾದಕ ವಸ್ತು ಸೇವಕರು ಮತ್ತು ಪೆಡ್ಲರ್ಜ್‌ಗಳ ವಿರುದ್ಧ ಸುಮಾರು 600 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ತಿಳಿಸಿದರು.

ಮಾದಕ ವ್ಯಸನಕ್ಕೆ ಒಳಗಾದವರು ಮತ್ತು ಮಾದಕ ವಸ್ತು ಜಾಲದಲ್ಲಿ ತೊಡಗಿರುವವರನ್ನು ಗುರುತಿಸಿ ಅವರನ್ನು ಮತ್ತೆ ಸಾಮಾನ್ಯ ಬದುಕಿನತ್ತ ತರಲು 'ಸನ್ಮಿತ್ರ' ಎಂಬ ವಿಶೇಷ ಉಪಕ್ರಮ ಆರಂಭಿಸಲಾಗಿದೆ ಎಂದು ಶರಣಪ್ಪ ಹೇಳಿದರು. ಈ ಯೋಜನೆಯಡಿ ಸಂಬಂಧಿತ ವ್ಯಕ್ತಿಗಳಿಗೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಅವರು ಸಂಪೂರ್ಣವಾಗಿ ಸುಧಾರಿಸುವವರೆಗೆ ನಿಗಾ ವಹಿಸಲಾಗುತ್ತಿದೆ. ಈ ಮೂಲಕ ಈಗಾಗಲೇ ಮಾದಕ ಜಾಲಕ್ಕೆ ಸಿಲುಕಿದ್ದ 150ಕ್ಕೂ ಹೆಚ್ಚು ಯುವಕರಲ್ಲಿ ಬದಲಾವಣೆಯ ಲಕ್ಷಣಗಳು ಕಂಡುಬಂದಿವೆ ಎಂದು ಅವರು ಹೇಳಿದರು.

18ರಿಂದ 25 ವರ್ಷದ ವಯಸ್ಸು ಜೀವನ ರೂಪಿಸಿಕೊಳ್ಳುವ ಅತ್ಯಂತ ಮಹತ್ವದ ಹಂತವಾಗಿದ್ದು, ಈ ಅವಧಿಯಲ್ಲಿ ಯುವಕರು ತಮ್ಮ ಗುರಿ ಮತ್ತು ಭವಿಷ್ಯದ ಕಡೆ ಗಮನಹರಿಸಬೇಕು, ಕೆಟ್ಟ ಚಟಗಳಿಗೆ ಬಲಿಯಾಗಬಾರದು ಎಂದು ಅವರು ಕಿವಿಮಾತು ಹೇಳಿದರು. ಮಾದಕ ವಸ್ತುಗಳ ವಿರುದ್ಧದ ಹೋರಾಟದಲ್ಲಿ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಸಮಾಜಸೇವಕರು ಮತ್ತು ಸಾರ್ವಜನಿಕರ ಪಾತ್ರ ಅತ್ಯಂತ ಮುಖ್ಯ ಎಂದು ಅವರು ತಿಳಿಸಿದರು.


ಶೈಕ್ಷಣಿಕ ಸಂಸ್ಥೆಗಳ ಸುತ್ತಮುತ್ತ, ವಸತಿ ಪ್ರದೇಶಗಳಲ್ಲಿ ಅಥವಾ ಬೇರೆಡೆ ಮಾದಕ ವಸ್ತು ಸೇವನೆ ಅಥವಾ ಮಾರಾಟಕ್ಕೆ ಸಂಬಂಧಿಸಿದ ಯಾವುದೇ ಅನುಮಾನಾಸ್ಪದ ಚಟುವಟಿಕೆ ಕಂಡುಬಂದರೆ ತಕ್ಷಣವೇ 112 ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಅವರು ಮನವಿ ಮಾಡಿದರು. ಮಾಹಿತಿ ನೀಡುವವರ ಗುರುತನ್ನು ಸಂಪೂರ್ಣ ಗೌಪ್ಯವಾಗಿಡಲಾಗುವುದು ಎಂದ ಅವರು, ಸಾರ್ವಜನಿಕರಿಂದ ದೊರೆಯುತ್ತಿರುವ ಮಾಹಿತಿಯ ಆಧಾರದ ಮೇಲೆ ಪೊಲೀಸರು ಗಸ್ತು ತೀವ್ರಗೊಳಿಸಿದ್ದು, ಮಾದಕ ವಸ್ತು ಸರಬರಾಜಿನಲ್ಲಿ ತೊಡಗಿರುವವರ ವಿರುದ್ಧ ವಿಶೇಷ ಕಾನೂನುಗಳಡಿ ಮುನ್ನೆಚ್ಚರಿಕಾ ಕ್ರಮಗಳನ್ನೂ ಕೈಗೊಂಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಯುನೈಟೆಡ್ ಆಸ್ಪತ್ರೆಯ ಕನ್ಸಲ್ಟೆಂಟ್ ನ್ಯೂರೋಸರ್ಜನ್ ಹಾಗೂ ಸ್ಪೈನ್ ಸರ್ಜನ್ ಡಾ. ವಿನಯಸಾಗರ ಶರ್ಮಾ, ಮಾದಕ ವ್ಯಸನವು ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯವನ್ನು ಹಾಳುಮಾಡುತ್ತದೆ ಎಂದು ಎಚ್ಚರಿಸಿದರು. 'ಒಮ್ಮೆ ಸೇವಿಸಿ ನೋಡೋಣ' ಎನ್ನುವ ಮನೋಭಾವವೂ ಅಪಾಯಕಾರಿಯಾಗಿದ್ದು, ಮಾದಕ ವಸ್ತುಗಳಿಂದ ಸಿಗುವ ಕ್ಷಣಿಕ ಉಲ್ಲಾಸದ ಹಿಂದೆ ಹೋಗುವ ಅಭ್ಯಾಸ ಕೊನೆಗೆ ವ್ಯಕ್ತಿಯನ್ನು ಸಂಪೂರ್ಣವಾಗಿ ವ್ಯಸನದ ಬಲೆಗೆ ತಳ್ಳುತ್ತದೆ ಎಂದು ಹೇಳಿದರು.

ಮಾದಕ ವ್ಯಸನದಿಂದ ವ್ಯಕ್ತಿಯ ವಿವೇಕ ಕುಂಠಿತಗೊಳ್ಳುವುದರ ಜೊತೆಗೆ ಕುಟುಂಬ ಮತ್ತು ಸಮಾಜದ ಮೇಲೂ ಗಂಭೀರ ದುಷ್ಪರಿಣಾಮ ಉಂಟಾಗುತ್ತದೆ ಎಂದು ಅವರು ಹೇಳಿದರು. ಯುವಕರು ದೃಢವಾಗಿ ಮಾದಕ ವಸ್ತುಗಳಿಗೆ 'ಬೇಡ' ಎಂದು ಹೇಳಬೇಕು ಹಾಗೂ ತಮ್ಮ ಸುತ್ತಮುತ್ತ ಇಂತಹ ಚಟುವಟಿಕೆಗಳು ಕಂಡುಬಂದರೆ ತಕ್ಷಣ ಸಂಬಂಧಪಟ್ಟವರಿಗೆ ಮಾಹಿತಿ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಮಾದಕ ವಸ್ತು ದುರ್ಬಳಕೆ ಮತ್ತು ಅಕ್ರಮ ಸಾಗಣೆಯ ಹೆಚ್ಚುತ್ತಿರುವ ಅಪಾಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಹಾಗೂ ಮಾದಕ ವಸ್ತು ಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪೊಲೀಸ್ ಸಿಬ್ಬಂದಿ, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಭಾಗವಹಿಸಿದ್ದರು.

# ಎಸ್ಐಆರ್ ನೆಪದಲ್ಲಿ ಎನ್ಆರ್‌ಸಿ ಭೀತಿ; ಸಾರ್ವಜನಿಕರು ನಿರ್ಲಕ್ಷ್ಯ ವಹಿಸದಿರಿ



**ಕಲಬುರಗಿ,ಜೂ 26:** ಮತದಾರರ ಪಟ್ಟಿ ಮ್ಯಾಪಿಂಗ್ ಅಂದರೆ ಎಸ್ಐಆರ್ ನ ಎನ್ಯುಮರೇಷನ್ ಫಾರ್ಮ್ ಪ್ರತಿಯೊಬ್ಬ ನಾಗರಿಕನಿಗೂ ಕಡ್ಡಾಯವಾಗಿದೆ ಎಂದು ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್‌ನ ರಾಷ್ಟ್ರೀಯ ಏಕತಾ (ಅಂತರ್ ಧರ್ಮೀಯ) ರಾಷ್ಟ್ರೀಯ ಕಾರ್ಯದರ್ಶಿ ಡಾ. ಮುಹಮ್ಮದ್ ಅಸ್ಗರ್ ಚುಲ್ಬುಲ್ ತಿಳಿಸಿದ್ದಾರೆ. ಜೂನ್ 30, 2026 ರಿಂದ ಬಿಎಲ್ಒ ಗಳು ನಿಮ್ಮ ಮನೆಗೆ ಬಂದು ಕನ್ನಡ ಭಾಷೆಯಲ್ಲಿರುವ ಎರಡು ಫಾರ್ಮಗಳನ್ನು ನೀಡಲಿದ್ದಾರೆ. ಸಾರ್ವಜನಿಕರು ತಮ್ಮ ಎಲ್ಲಾ ವೈಯಕ್ತಿಕ ಕೆಲಸಗಳು, ಪ್ರವಾಸಗಳು ಮತ್ತು ಇತರ ಕಾರ್ಯಕ್ರಮಗಳನ್ನು ಬದಿಗಿಟ್ಟು, ಮೊದಲಿಗೆ ಬಿಎಲ್ಒಗಳೊಂದಿಗೆ ಸಹಕರಿಸಿ ಮ್ಯಾಪಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು ಎಂದು ಅವರು ಮನವಿ ಮಾಡಿದರು.ಕಮರ್ ಕಾಲೋನಿಯ ಶಾಲಿಮಾರ್ ಫಂಕ್ಷನ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ಒಂದು ದಿನದ ಎಸ್ಐಆರ್ ಸಾರ್ವಜನಿಕ ಜಾಗೃತಿ ಅಭಿಯಾನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಡಾ. ಅಸ್ಗರ್ ಚುಲ್ಬುಲ್ ಅವರು ನಾಗರಿಕರಲ್ಲಿ ತಮ್ಮ ಫಾಗಳನ್ನು ಭರ್ತಿ ಮಾಡುವುದರ ಜೊತೆಗೆ, ನೆರೆಹೊರೆಯವರಿಗೆ ಮತ್ತು ಅನಕ್ಷರಸ್ಥರಿಗೆ ಸಹಾಯ ಮಾಡುವಂತೆ ಮನವಿ ಮಾಡಿದರು. ಶೀಘ್ರದಲ್ಲೇ ಎಲ್ಲಾ ಜವಾಬ್ದಾರಿಯುತ ಮುಖಂಡರೊಂದಿಗೆ ಸಮಾಲೋಚನೆ ನಡೆಸಿ ಜಿಲ್ಲೆಗಾಗಿ ಒಂದು ಮಾಹಿತಿ ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಲಾಗುವುದು ಮತ್ತು ಅವರು ಸ್ವತಃ ತಮ್ಮ ಮನೆ ಹಾಗೂ ಕಚೇರಿಯಿಂದ ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸುವುದಾಗಿ ಘೋಷಿಸಿದರು.

ನಮ್ಮಲ್ಲಿ ಸರಿಯಾಗಿ ಮ್ಯಾಪಿಂಗ್ ಮಾಡಿಸದಿರುವುದೇ ದೊಡ್ಡ ಸಮಸ್ಯೆಯಾಗಿದೆ ಎಂದು ಡಾ. ಚುಲ್ಬುಲ್ ಎಚ್ಚರಿಸಿದ್ದಾರೆ. ಮ್ಯಾಪಿಂಗ್ ಸಮಯದಲ್ಲಿ ಹೆಸರಿನ ಮುಂದೆ ಯಾವುದೇ ಗುರುತು (ಉದಾಹರಣೆಗೆ ಕಣ್ಣಿನ ಗುರುತು) ಬಂದರೆ, ಅದನ್ನು 'ಲೋಪದೋಷ' ಎಂದು ಪರಿಗಣಿಸಲಾಗುತ್ತದೆ ಮತ್ತು ಆ ಹೆಸರು ಅನುಮಾನದ ವ್ಯಾಪ್ತಿಗೆ ಬರುತ್ತದೆ. ಅಂತಹ ಸಂದರ್ಭದಲ್ಲಿ ಚುನಾವಣಾ ಆಯೋಗದಿಂದ ಅಧಿಕೃತ ನೋಟಿಸ್ ಜಾರಿಯಾಗಲಿದ್ದು, ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರು ತಮ್ಮ ರಾಜಕೀಯ ಬಿಎಲ್ಎ ಗಳೊಂದಿಗೆ ಸಂಪರ್ಕದಲ್ಲಿದ್ದು, ಫಾರ್ಮ್ ಸರಿಯಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು. 18 ವರ್ಷ ತುಂಬಿದ ಯಾರ ಹೆಸರು ಮತದಾರರ ಪಟ್ಟಿಯಲ್ಲಿಲ್ಲವೋ, ಅವರು ಫಾರ್ಮ್ ನಂಬರ್ 6 ರ ಜೊತೆಗೆ ಬಿಎಲ್ಒ ಬಳಿ ಇರುವ ಪ್ರಮಾಣಪತ್ರವನ್ನು ಪಡೆದು ಅಲ್ಲಿಯೇ ಸಲ್ಲಿಸಬೇಕು.

ಸಭೆಯನ್ನುದ್ದೇಶಿಸಿ ಮಾತನಾಡಿದ ಇತರ ಗಣ್ಯರು ಸಹ ಈ ಅಭಿಯಾನದ ಪ್ರಾಮುಖ್ಯತೆಯ ಕುರಿತು ವಿವರವಾಗಿ ಬೆಳಕು ಚೆಲ್ಲಿದರು.ಮೌಲಾನಾ ಶರೀಫ್ ಮರ್ಬ್ಬರಿ,ಡಾ. ಹುಸೇನ್,ಬಾಬಾ ನಝುರ್ ಮುಹಮ್ಮದ್ ಖಾನ್,ಮೌಲಾನಾ ಮುಹಮ್ಮದ್ ನೂಹ್,ಇಂಜಿನಿಯರ್ ಮುಷ್ತಾಕ್ ಅಹ್ಮದ್,ಅಫ್ಜಲ್ ಮಹಮೂದ್,ಮುನ್ನಾ ಧಾರವಾಡ,

ಮಾಜಿ ಮೇಯರ್ ಮುಹಮ್ಮದ್ ಜಾಹಿದ್, ಮೌಲಾನಾ ಅಬ್ದುಲ್ ಹಮೀದ್ ಬಾಖವಿ ದಾನಿಶ್, ಮುಹಮ್ಮದ್ ಇಸ್ಮಾಯಿಲ್, ಅಸದ್ ಅಲಿ ಅನ್ಸಾರಿ, ಆದಿಲ್ ಸುಲೈಮಾನ್ ಸೇಠ್, ಮೌಲಾನಾ ಹಾಫೀಜ್ ಅಜ್ಮತ್ ಫಾರೂಖಿ ಉಮರಿ, ಮಹಮೂದ್ ಶಾ, ಮುಹಮ್ಮದ್ ಜಾವೇದ್ ಖಾನ್, ತೌಫೀಕ್ ದೇಸಾಯಿ, ಸದ್ದಾಂ ಹುಸೇನ್ ಮದ್ರಾಸಿ ಸೇರಿದಂತೆ ಅಪಾರ ಸಂಖ್ಯೆಯ ಸ್ಥಳೀಯ ಗಣ್ಯರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಇಂದಿನಿಂದ ಮಹಾದೇವಿಯಕ್ಕಗಳ ಸಮ್ಮೇಳನ



**ಕಲಬುರಗಿ,ಜೂ 26:** ಬಸವ ಸಮಿತಿಯ ಅಕ್ಕನ ಬಳಗವು ಆಯೋಜಿಸಿದ ಎರಡು ದಿನಗಳ 16 ನೆಯ ಮಹಾದೇವಿಯಕ್ಕಗಳ ಸಮ್ಮೇಳನ ನಾಳೆ ( ಜೂನ್. 27) ಮತ್ತು 28 ರಂದು ಕಲಬುರಗಿ ಜಯನಗರದಲ್ಲಿರುವ ಅನುಭವ ಮಂಟಪದಲ್ಲಿ ಜರುಗಲಿದೆ.

ಸಮ್ಮೇಳನದ ಅಧ್ಯಕ್ಷರಾಗಿ ಲೇಖಕಿ ಮತ್ತು ವಿಶ್ರಾಂತ ಪ್ರಾಧ್ಯಾಪಕಿ ಡಾ.ನೀಲಮ್ಮಕತ್ನಳ್ಳಿ ಅವರು ಆಯ್ಕೆಯಾಗಿದ್ದಾರೆ. "ಡಾ. ಬಿ.ಡಿ. ಜತ್ತಿ ವೈರಾಗ್ಯನಿಧಿ ಅಕ್ಕ ಪ್ರಶಸ್ತಿ-2026 ಪ್ರಶಸ್ತಿಯನ್ನು ಮತ್ತೊಬ್ಬ ಲೇಖಕಿ ಪ್ರೊ.ಗಂಗಮ್ಮ ಸತ್ಯಂಪೇಟೆ ಅವರಿಗೆ ಪ್ರದಾನ ಮಾಡಲಾಗುತ್ತಿದೆ.

ಇದೇ ಸಂದರ್ಭದಲ್ಲಿ ಸ್ಥಳೀಯ ಶಾಲೆಗಳಲ್ಲಿ 35 ರಿಂದ 50 ವರ್ಷಶಿಕ್ಷಕರಾಗಿ, ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಶಾರದಾ ರಾಂಪೂರೆ, ಶಶಿಕಲಾ ಸಾಲೋಕ್ಯ, ಶಾಂತಾ ಪಾಟೀಲ, ಉಮಾ ಪಾಟೀಲ, ನಂದಾ ಪಾಟೀಲ ಅವರೆಲ್ಲರಿಗೆ ಗೌರವ ಸನ್ಮಾನ ಮಾಡಲಾಗುತ್ತಿದೆ.

ಈ ಸಮ್ಮೇಳನದ ವಿಶೇಷವೆಂದರೆ ಸುಮಾರು 200 ಜನ ಮಹಿಳೆಯರು, ವಿದ್ಯಾರ್ಥಿನಿಯರು ವೇದಿಕೆಯಲ್ಲಿತಮ್ಮ ಅನುಭವ ಮತ್ತು ಪ್ರತಿಭೆಯನ್ನುವ್ಯಕ್ತಿ ಪಡಿಸುತ್ತಾರೆ.ಜೂ 27 ರಂದು ಬೆಳಗ್ಗೆ ಈ ಸಮ್ಮೇಳನವನ್ನು ಭಾಲ್ಕಿಯ ಡಾ.ಗೀತಾಖಂಡ್ರೆ ಅವರು ಉದ್ಘಾಟಿಸುವರು. ಸಮ್ಮೇಳನದಲ್ಲಿ 5 ಸಾಹಿತ್ಯಿಕ ಗೋಷ್ಠಿಗಳುಜರುಗಲಿವೆ. ಎರಡು ವಿಶೇಷ ಉಪನ್ಯಾಸಗಳಿರುತ್ತವೆ. ಏಳುಭಾಗಗಳಲ್ಲಿ ಬಗೆಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಕಲಬುರಗಿಯ ನಾಗರಿಕರು ಈ ಸಮ್ಮೇಳನಕ್ಕೆ ಪ್ರೇಕ್ಷಕರಾಗಿ ಆಗಮಿಸಿ, ಪ್ರೋತ್ಸಾಹಿಸಬೇಕೆಂದು ಬಸವ ಸಮಿತಿಯ ಅಧ್ಯಕ್ಷರಾದ ಡಾ. ವಿಲಾಸವತಿ ಖೂಬಾ, ಸಮ್ಮೇಳನದ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ಶರಣಮ್ಮ ಕಲಬುರಗಿ, ಕಾರ್ಯದರ್ಶಿ ಅನಸೂಯಾ ನಡಕಟ್ಟಿ,ಕಾರ್ಯಾಧ್ಯಕ್ಷರು, ಸಂಚಾಲಕರೂ ಆದ ಡಾ.ಜಯಶ್ರೀದಂಡೆ ಅವರು ವಿನಂತಿಸಿಕೊಂಡಿದ್ದಾರೆ.

# ವಿಶ್ವ ಯೋಗ ದಿನಾಚರಣೆ: ಸದ್ಗುರು ದೀಪ ವಾವ್ ಕಿಡ್ಸ್ ಶಾಲೆಯಲ್ಲಿ ಯೋಗ ಜಾಗೃತಿ ಕಾರ್ಯಕ್ರಮ



**ಬೀದರ್, ಜೂ 26:** ನಗರದ ಅಕ್ಕಮಹಾದೇವಿ ಬಡಾವಣೆಯಲ್ಲಿರುವ ಸದ್ಗುರು ದೀಪ ವಾವ್ ಕಿಡ್ಸ್ ಪಬ್ಲಿಕ್ ಶಾಲೆ ಹಾಗೂ ರೂಪಾ ಕಲೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಟ್ರಸ್ಟ್ ಇವರ ಸಂಯುಕ್ತಾಶ್ರಯದಲ್ಲಿ 12ನೇ ವಿಶ್ವ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಯೋಗ ಗುರು ಹಾಗೂ ಪತಂಜಲಿ ಯೋಗ ಪೀಠ ಬೀದರ್ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ರೂಪಾ ಪಾಟೀಲ್ ಉದ್ಘಾಟಿಸಿ, ಶಾಲೆಯ ಪದಾಧಿಕಾರಿಗಳು, ಸಿಬ್ಬಂದಿ ಹಾಗೂ ಮಕ್ಕಳಿಗೆ ಯೋಗ ತರಬೇತಿ ನೀಡಿದರು. ಈ ಸಂದರ್ಭದಲ್ಲಿ ಯೋಗ ಮತ್ತು ಪ್ರಾಣಾಯಾಮವು ಮೆದುಳು, ಹೃದಯ, ಶ್ವಾಸಕೋಶ ಸೇರಿದಂತೆ ದೇಹದ ಪ್ರತಿಯೊಂದು ಅಂಗಾಂಗದ ಆರೋಗ್ಯಕ್ಕೆ ಅಗತ್ಯವಾಗಿದ್ದು, ಮಕ್ಕಳ ಬೆಳವಣಿಗೆ ಮತ್ತು ಜ್ಞಾಪಕಶಕ್ತಿ ವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ ಎಂದು ತಿಳಿಸಿದರು.

ಪ್ರತಿಯೊಬ್ಬ ಮಗುವಿಗೂ ಬಾಲ್ಯದಲ್ಲಿಯೇ ಯೋಗದ ತರಬೇತಿ ನೀಡಬೇಕು. ತಾಡಾಸನ, ವೃಕ್ಷಾಸನ ಹಾಗೂ ಭ್ರಮರಿ ಪ್ರಾಣಾಯಾಮಗಳನ್ನು ಮಕ್ಕಳಿಗೆ ಅಭ್ಯಾಸ ಮಾಡಿಸುವುದು ಅಗತ್ಯ ಎಂದು ಅವರು ಹೇಳಿದರು. ಆರೋಗ್ಯಕರ ಆಹಾರ ಹಾಗೂ ಯೋಗಾಭ್ಯಾಸದ ಮೂಲಕ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.

ಶಾಲೆಯ ಶಿಕ್ಷಕರಿಗೂ ವಿಶೇಷ ಯೋಗ ತರಬೇತಿ ನೀಡಿದ ರೂಪಾ ಪಾಟೀಲ್, ಮುಂದಿನ ದಿನಗಳಲ್ಲಿ ಪ್ರತಿ ವಾರ ಶಾಲೆಗೆ ಆಗಮಿಸಿ ಯೋಗಾಭ್ಯಾಸ ನಡೆಸಿಕೊಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲೆಯ ಅಧ್ಯಕ್ಷ ಪ್ರದೀಪ್ ಗಾಜಲ್, ಪ್ರತಿವರ್ಷ ಯೋಗ ದಿನಾಚರಣೆಯಲ್ಲಿ ಭಾಗವಹಿಸಿ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಯೋಗದ ತರಬೇತಿ ನೀಡುತ್ತಿರುವ ರೂಪಾ ಪಾಟೀಲ್ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಮುಖ್ಯ ಅತಿಥಿ ಮಂಗಲಾ ಗಾಜಲ್ ಮಾತನಾಡಿ, ಯೋಗಗುರುಗಳ ಜೀವನಶೈಲಿ ಎಲ್ಲರಿಗೂ ಮಾದರಿಯಾಗಿದ್ದು, ಉತ್ತಮ ಆರೋಗ್ಯಕ್ಕಾಗಿ ಪ್ರತಿದಿನ ಯೋಗಾಭ್ಯಾಸ ಮಾಡುವುದು ಅಗತ್ಯ ಎಂದು ಹೇಳಿದರು.

ಪ್ರಾಂಶುಪಾಲೆ ರಾಣಿ ಗಾಜಲ್ ಮಾತನಾಡಿ, ರೂಪಾ ಪಾಟೀಲ್ ಅವರ ಮಾರ್ಗದರ್ಶನದಲ್ಲಿ ಪ್ರತಿದಿನ ಯೋಗಾಭ್ಯಾಸ ಮಾಡುವುದನ್ನು ರೂಢಿಸಿಕೊಂಡಿದ್ದು, ಇದರಿಂದ ಆರೋಗ್ಯದಲ್ಲಿ ಉತ್ತಮ ಬದಲಾವಣೆ ಕಂಡುಬಂದಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಸಿಬ್ಬಂದಿಗಳಾದ ನಿಶಾ, ಅಶ್ವಿನಿ, ಅಂಬಿಕಾ, ಪ್ರೀತಿ ಸೇರಿದಂತೆ ಇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕ್ಷಯ ರೋಗ, ತಂಬಾಕು ವ್ಯಸನ ಮುಕ್ತ ಏಕೀಕರಣದ ಕಾರ್ಯಾಗಾರ




**ಕಲಬುರಗಿ,ಜೂ.26**–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿ ಸಭಾಂಗಣದಲ್ಲಿ ರಾಜ್ಯ ತಂಬಾಕು ನಿಯಂತ್ರಣ ಕೋಶ ಕರ್ನಾಟಕ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮ ಕ್ಷಯ ರೋಗ ಮತ್ತು ತಂಬಾಕು ವ್ಯಸನ ಮುಕ್ತ ಏಕೀಕರಣದ ಕಾರ್ಯಾಗಾರ ಏರ್ಪಡಿಸಲಾಗಿತ್ತು. ಕಾರ್ಯಾಗಾರದಲ್ಲಿ ಜಿಲ್ಲಾ ಅ.ಕು.ಕ ಇಲಾಖೆಯ ವಿಭಾಗೀಯ ಉಪ ನಿರ್ದೇಶಕರು ಡಾ. ಶರಣಬಸಪ್ಪ ಗಣಜಲಖೇಡ ರವರು ಮಾತಾನಾಡುತ್ತ ಟಿಬಿ (ಕ್ಷಯ ರೋಗ) ಮತ್ತು ತಂಬಾಕು ವ್ಯಸನ ಮುಕ್ತ ಕಾರ್ಯಕ್ರಮ ಭಾರತ ಸರ್ಕಾರದ ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ ಮತ್ತು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಂಟಿ ಸಹಯೋಗದೊಂದಿಗೆ ಜಾರಿಗೆ ತರಲಾದ ಒಂದು ಪ್ರಮುಖ ಆರೋಗ್ಯ ಉಪಕ್ರಮವಾಗಿದೆ. ತಂಬಾಕು ಸೇವನೆಯು ಶ್ವಾಸಕೋಶವನ್ನು ದುರ್ಬಲಗೊಳಿಸಿ ಕ್ಷಯ ರೋಗ ಬರುವ ಅಪಾಯವನ್ನು ದುಪ್ಪಟ್ಟು ಮಾಡುವುದರಿಂದ, ಈ ಎರಡೂ ಸಮಸ್ಯೆಗಳನ್ನು ಒಟ್ಟಿಗೆ ಎದುರಿಸಲು ಕರ್ನಾಟಕ ಸರ್ಕಾರವು ಇತ್ತೀಚೆಗೆ ವಿಭಾಗೀಯ ಮಟ್ಟದಲ್ಲಿ ಇವೆರಡನ್ನೂ ಸಂಯೋಜಿಸುವ ವಿಶೇಷ ಅಭಿಯಾನವನ್ನು ತೀವ್ರಗೊಳಿಸಿದೆ. ತಂಬಾಕು ಸೇವನೆ ಆರೋಗ್ಯಕ್ಕೆ ಹಾನಿಕರ ಅದರಲ್ಲೂ ಟಿಬಿ ಬಂದಂತಹವರಿಗೆ ಆಪ್ತ ಸಮಾಲೋಚನೆ ಮಾಡುವ ಮೂಲಕ ತಂಬಾಕು ವ್ಯಸನ ಮುಕ್ತ ಮಾಡಲಾಗುತ್ತದೆ ಎಂದರು.

ಕಾರ್ಯಕ್ರಮದ ಮುಖ್ಯ ಉದ್ದೇಶಗಳು,ಅಪಾಯದ ಕಡಿತಗೊಳಿಸುವಿಕೆ ಕ್ಷಯ ರೋಗಿಗಳಲ್ಲಿ ತಂಬಾಕು ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವ ಮೂಲಕ ಚಿಕಿತ್ಸೆಯ ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸುವುದು.ಸಮಗ್ರ ತಪಾಸಣೆ: ಆಸ್ಪತ್ರೆಗೆ ಬರುವ ಪ್ರತಿಯೊಬ್ಬ ಟಿಬಿ ರೋಗಿಯನ್ನು ತಂಬಾಕು ವ್ಯಸನದ ಹಿನ್ನೆಲೆಗಾಗಿ ಕಡ್ಡಾಯವಾಗಿ ತಪಾಸಣೆ ಮಾಡುವುದು. ಅರಿವು ಮೂಡಿಸುವುದು: ತಂಬಾಕು ಸೇವನೆಯಿಂದ ಕ್ಷಯ ರೋಗವು ಹೇಗೆ ಉಲ್ಬಣಗೊಳ್ಳುತ್ತದೆ ಮತ್ತು ಶೇ. 40 ರಷ್ಟು ಟಿಬಿ ಸಾವುಗಳಿಗೆ ತಂಬಾಕು ಹೇಗೆ ಕಾರಣವಾಗುತ್ತದೆ ಎಂಬುದರ ಬಗ್ಗೆ ಜಾಗೃತಿ ಮೂಡಿಸುವುದು ಆರೋಗ್ಯ ಕಾರ್ಯಕರ್ತರ 3 ಹಂತದ ಕಾರ್ಯವಿಧಾನ

1.ವಿಚಾರಿಸಿ : ಸಮೀಕ್ಷೆ ಹಾಗೂ ತಪಾಸಣೆಯ ಸಮಯದಲ್ಲಿ ಪ್ರತಿಯೊಬ್ಬರನ್ನೂ ಅವರು ಧೂಮಪಾನ ಅಥವಾ ತಂಬಾಕು ಜಗಿಯುವ ಅಭ್ಯಾಸ ಹೊಂದಿದ್ದಾರೆಯೇ ಎಂದು ಕೇಳಿ ತಿಳಿದುಕೊಳ್ಳುವುದು.

2.ಸಮಗ್ರ ತಪಾಸಣೆ: ಆಸ್ಪತ್ರೆಗೆ ಬರುವ ಪ್ರತಿಯೊಬ್ಬ ಟಿಬಿ ರೋಗಿಯನ್ನು ತಂಬಾಕು ವ್ಯಸನದ ಹಿನ್ನೆಲೆಗಾಗಿ ಕಡ್ಡಾಯವಾಗಿ ತಪಾಸಣೆ ಮಾಡುವುದು.3.ಅರಿವು ಮೂಡಿಸುವುದು: ತಂಬಾಕು ಸೇವನೆಯಿಂದ ಕ್ಷಯ ರೋಗವು ಹೇಗೆ ಉಲ್ಬಣಗೊಳ್ಳುತ್ತದೆ ಮತ್ತು ಶೇ. 40 ರಷ್ಟು ಟಿಬಿ ಸಾವುಗಳಿಗೆ ತಂಬಾಕು ಹೇಗೆ ಕಾರಣವಾಗುತ್ತದೆ ಎಂಬುದರ ಬಗ್ಗೆ Ending ಮೂಡಿಸುವುದು ಎಂದು ತಿಳಿಸಿದರು.

ಮೊದಲಿಗೆ ಕಾರ್ಯಕ್ರಮದಲ್ಲಿ ಸಸಿಗೆ ನೀರುಣಿಸುವುದುರ ಮೂಲಕ ಜಂಟಿಯಾಗಿ ಜಿಲ್ಲಾ ಅ.ಕು.ಕ ಇಲಾಖೆಯ ವಿಭಾಗೀಯ ಉಪ ನಿರ್ದೇಶಕರು ಡಾ. ಶರಣಬಸಪ್ಪ ಗಣಜಲಖೇಡ್ ಮತ್ತು ಡಾ. ಅಂಬಾರಾಯ್ ರುದ್ರವಾಡಿ ಅವರು ಉದ್ಘಾಟಿಸಿ ಮಾತನಾಡಿದರು.

ಇನ್ಮೊರ್ವ ಡಾ.ಅಂಬಾರಾಯ್ ರುದ್ರವಾಡಿ ರವರು ಮಾತನಾಡುತ್ತ ಟಿಬಿ (ಕ್ಷಯ ರೋಗ) ಮತ್ತು ತಂಬಾಕು ವ್ಯಸನ ಮುಕ್ತ ಜಾಗೃತಿ ಕಾರ್ಯಕ್ರಮವು ಸಾರ್ವಜನಿಕರ ಆರೋಗ್ಯವನ್ನು ಸುಧಾರಿಸಲು ಮತ್ತು ಮಾರಕ ಕಾಯಿಲೆಗಳಿಂದ ಜನರನ್ನು ರಕ್ಷಿಸಲು ಹಮ್ಮಿಕೊಳ್ಳಲಾಗುವ ಅತ್ಯಂತ ಪ್ರಮುಖ ಅಭಿಯಾನವಾಗಿದೆ. ತಂಬಾಕು ಸೇವನೆಯು ಶ್ವಾಸಕೋಶವನ್ನು ದುರ್ಬಲಗೊಳಿಸಿ, ಟಿಬಿ ರೋಗ ಬರುವ ಸಾಧ್ಯತೆಯನ್ನು ಹೆಚ್ಚಿಸುವುದರಿಂದ ಈ ಎರಡೂ ವಿಷಯಗಳ ಬಗ್ಗೆ ಒಟ್ಟಿಗೆ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ.

ಟಿಬಿ ಮತ್ತು ತಂಬಾಕು ವ್ಯಸನ ಮುಕ್ತ ಜಾಗೃತಿ ಹಾಗೂ ಪ್ರಚಾರ ಅಭಿಯಾನವನ್ನು ಗರಿಷ್ಠ ಮಟ್ಟದ ಪ್ರಭಾವ ಬೀರಲು ಡಿಜಿಟಲ್ ಮತ್ತು ಸಾಂಪ್ರದಾಯಿಕ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹಮ್ಮಿಕೊಳ್ಳಬೇಕಾಗುತ್ತದೆ.

ಡಿಜಿಟಲ್ ಮಾಧ್ಯಮಗಳ ಮೂಲಕ ಪ್ರಚಾರ ಸಾಂಪ್ರದಾಯಿಕ ಮಾಧ್ಯಮ ಮತ್ತು ಆನ್‌ಲೈನ್ ಪ್ರಚಾರ

ಶಾಲಾ-ಕಾಲೇಜುಗಳಲ್ಲಿ ವಿಶೇಷ ಜಾಗೃತಿ

ಸಮುದಾಯ ಮಟ್ಟದ ಪ್ರಚಾರ ಚಟುವಟಿಕೆಗಳು ಈ ಮೇಲಿನ ಜಾಗೃತಿ ಕಾರ್ಯಕ್ರಮದಿಂದ ರೋಗ ಮುಕ್ತ ವ್ಯಸನ ಮುಕ್ತ ಮಾಡಬಹದುದೆಂದರು.

ವೇದಿಕೆ ಮೇಲೆ ಮುಖ್ಯಅತಿಥಿ ಸ್ಥಾನ ವಹಿಸಿಕೊಂಡ ಸರ್ವಲೆನ್ಸ್ ಮೆಡಿಕಲ್ ಆಫೀಸರ್ ಡಬ್ಲ್ಯೂ ಎಚ್ ಓ ಸಲಹೆಗಾರರಾದ ಡಾ.ಅನಿಲಕುಮಾರ ತಾಳಿಕೋಟಿ, ಜಿಲ್ಲಾ ಅರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ್. ಜಿಲ್ಲಾ ತಂಬಾಕು ನಿಯಂತ್ರಣಾಧಿಕಾರಿ ಡಾ.ರಾಕೇಶ್ ಕಾಂಬಳೆ. ರಾಜ್ಯ ತಂಬಾಕು ಚೇಸ್ಸಷನ್ ಯೋಜನಾ ಅಧಿಕಾರಿ ರಾಜೇಶ್ ಭಾರತೀಯ, ಜಿಲ್ಲಾ ನಿರ್ಮೂಲನಾದಕಾರಿ ಡಾ.ಚಂದ್ರಕಾಂತ್ ನರಿಬೋಳ, ಡಾ.ಅನಿಲ್ ಚಿಂತಾಮಣಿ ಬೀದರ್, ವಿಭಾಗೀಯ ತಂಬಾಕು ನಿಯಂತ್ರಣ ಘಟಕದ ಕಾರ್ಯಕ್ರಮ ಸಂಯೋಜಕರು ಮಹಾಂತೇಶ್ ಉಳ್ಳಾಗಡಿ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಪ್ರಮುಖರಾದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಲಹೆಗಾರರಾದ ಸುಜಾತಾ ಪಾಟೀಲ, ಸೋಶಿಯಲ್ ವರ್ಕರ್ ಕು. ಆರತಿ ಧನಶ್ರೀ, ಜಿಲ್ಲಾ ಸೈಕ್ಯಾಟ್ರಿಕ್ ಕೌನ್ಸಲರ್ ಮಂಜುನಾಥ ಕಂಬಾಳಿಮಠ, ಗಣಕ ಯಂತ್ರ ಸಹಾಯಕರು ರವಿಕುಮಾರ ಪೂಜಾರಿ ಇದ್ದರು.

ನಿರೂಪಣೆಯನ್ನು ಮಹಾಂತೇಶ್ ಉಳ್ಳಾಗಡಿ ಸುಜಾತಾ ಪಾಟೀಲ ಅವರು ಕಾರ್ಯಕ್ರಮದ ಸ್ವಾಗತಿಸಿ. ವಂದಿಸಿದರು. ನಂತರ ಟಿ ಸಿ ಸಿ ಸ್ಯಾಟಲೈಟ್ ಪೊ?ಸ್ಟರ್ ಬಿಡುಗಡೆಗೊಳಿಸಲಾಯಿತು.

ಈ ಒಂದು ವಿಭಾಗೀಯ ಟಿಬಿ (ಕ್ಷಯ ರೋಗ) ಮತ್ತು ತಂಬಾಕು ವ್ಯಸನ ಮುಕ್ತ ಏಕೀಕರಣದ ಕಾರ್ಯಾಗಾರದಲ್ಲಿ ಬೀದರ, ಬಳ್ಳಾರಿ, ರಾಯಚೂರ್, ಯಾದಗಿರಿ, ಕೊಪ್ಪಳ, ವಿಜಯನಗರ, ಕಲಬುರಗಿ, ವಿಭಾಗದ ಎಲ್ಲಾ ಎನ್ ಟಿ ಇ ಪಿ ಕಾರ್ಯಕ್ರಮದ ಡಿಟಿಓ. ಡಿಪಿಎಂ, ಡಿಪಿಎಸ್, ಎಸ್ ಟಿ ಎಸ್, ಮತ್ತು ಎನ್ ಟಿ ಸಿ ಪಿ ಕಾರ್ಯಕ್ರಮದ ಟಿ ಸಿ ಸಿ ಆಪ್ತ ಸಮಾಲೋಚಕರು, ಅಧಿಕಾರಿಗಳು. ಹಾಗೂ ಇತರರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ಅತಿಯಾದ ಮೊಬೈಲ್ ಬಳಕೆಯಿಂದ ಅನೇಕ ಸಮಸ್ಯೆ




**ಬೀದರ್:ಜೂ.26:**ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಿಂದ ಹಿರಿಯರ ವರೆಗೆ ಅನೇಕ ಸಮಸ್ಯೆಗಳು ಉಂಟಾಗುತ್ತಿವೆ ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ದೇವಿಪ್ರಸಾದ್ ಕಲಾಲ್ ಹೇಳಿದರು.

ತಾಲ್ಲೂಕಿನ ಮಂದಕನಳ್ಳಿ ಗ್ರಾಮದ ಸರ್ಕಾರಿ ಪ್ರೌಢ'ಶಾಲೆಯಲ್ಲಿ ಬುಧವಾರ ನಡೆದ 'ಮೊಬೈಲ್ ಬಿಡಿ, ಪುಸ್ತಕ ಹಿಡಿ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಣ್ಣಿನ ಸಮಸ್ಯೆ, ತಲೆ ನೋವು, ನಿದ್ರಾಹೀನತೆ, ನೆನಪಿನ ಶಕ್ತಿ ಕಡಿಮೆಯಾಗುವುದು, ಒಂಟಿತನ ಮುಂತಾದವು ಮೊಬೈಲ್‌ನ ದುಷ್ಪರಿಣಾಮಗಳಾಗಿವೆ ಎಂದು ತಿಳಿಸಿದರು.

ಮಕ್ಕಳು ಹಾಗೂ ಯುವಕರು ದಿನಕ್ಕೆ ಹಲವು ಗಂಟೆ ಮೊಬೈಲ್‌ನಲ್ಲಿ ಕಳೆಯುತ್ತಿದ್ದಾರೆ. ಓದು, ಕ್ರೀಡೆ ಹಾಗೂ ಕುಟುಂಬದ ಜತೆ ಸಮಯ ಕಳೆಯುವುದು ಕಡಿಮೆಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪುಸ್ತಕಗಳು ಜೀವನಕ್ಕೆ ದಾರಿದೀಪವಾಗಿವೆ. ಹೀಗಾಗಿ ಮೊಬೈಲ್ ಬಳಕೆ ಮಿತಿಗೊಳಿಸಿ, ಪುಸ್ತಕ ಓದುವ ಅಭ್ಯಾಸ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಪುಸ್ತಕ ಓದಿನಿಂದ ಜ್ಞಾನ, ಭಾಷಾ ಕೌಶಲ, ಚಿಂತನೆ ಶಕ್ತಿ, ಕಲ್ಪನೆ ಶಕ್ತಿ, ಏಕಾಗ್ರತೆ, ಸೃಜನಶೀಲತೆ ಹಾಗೂ ಆತ್ಮವಿಶ್ವಾಸ ಹೆಚ್ಚುತ್ತದೆ. ಕಾರಣ, ನಿತ್ಯ ಅರ್ಧ ತಾಸಾದರೂ ಪುಸ್ತಕ ಓದಬೇಕು ಎಂದು ಅಧ್ಯಕ್ಷತೆ ವಹಿಸಿದ್ದ ಮುಖ್ಯಶಿಕ್ಷಕ ಪಾಂಡುರಂಗ ಬೆಲ್ದಾರ್ ಹೇಳಿದರು.

ಜಗದೀಶಕುಮಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್.ಡಿ.ಎಂ.ಸಿ. ಅಧ್ಯಕ್ಷ ಅಹ್ಮದ್ ಪಾಶಾ, ಪ್ರಮುಖರಾದ ಸೂರ್ಯಕಾಂತ, ಬದರ್ ರಿಜ್ವಾನಾ, ಶ್ರೀನಿವಾಸ್, ದೀನಾ ವಿ. ಅಂಟಿನ್, ದತ್ತಮ್ಮ, ಶಾಜೀಯಾ ತಮಕನಾಥ, ಜರೀನಾ, ಫಹಮಿದಾ, ಕವಿತಾ ಮೇತ್ರೆ, ರಜಿಯಾ, ಸಂಗೀತಾ ಇದ್ದರು.

ಸೈಯದ್ ಜಾಕೀರ್ ಹುಸೇನ್ ಸ್ವಾಗತಿಸಿದರು. ಶಾಂತಕುಮಾರ ಜೈದೊಡ್ಡಿ ನಿರೂಪಿಸಿದರು. ಬಾಬರ್ ಹುಸೇನ್ ವಂದಿಸಿದರು.

# ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ 28ಕ್ಕೆ



**ಬೀದರ್: ಜೂ.26:**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿಸ್ಡಂ ಶಿಕ್ಷಣ
ಸಂಸ್ಥೆಗಳ ಸಮೂಹದ ಸಹಯೋಗದಲ್ಲಿ ನಗರದ ಸಿದ್ಧಿ ತಾಲೀಂನಲ್ಲಿರುವ ವಿಸ್ಡಂ ಹಿರಿಯಪ್ರಾಥಮಿಕ ಶಾಲೆಯಲ್ಲಿ ಜೂ. 28 ರಂದು ಬೆಳಿಗ್ಗೆ 7.30ಕ್ಕೆ ರಾಷ್ಟ್ರೀಯ ಪಲ್ಸ್
ಪೋಲಿಯೋ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಈಶ್ವರ ಖಂಡ್ರೆ ಕಾರ್ಯಕ್ರಮಕ್ಕೆ
ಚಾಲನೆ ನೀಡುವರು. ಸಂಸದ ಸಾಗರ್ ಖಂಡ್ರೆ, ಶಾಸಕ ರಹೀಂಖಾನ್,
ಜಿಲ್ಲಾಧಿಕಾರಿ ಶಿಲ್ಪಾಶರ್ಮಾ, ಜಿಲ್ಲಾ ಪಂಚಾಯಿತಿ ಮುಖ್ಯ
ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಧ್ಯಾನೇಶ್ವರ ನೀರಗುಡಿ ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ವಿಸ್ಡಂ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷಮುಹಮ್ಮದ್ ಆಸಿಫೊದ್ದೀನ್ ತಿಳಿಸಿದ್ದಾರೆ.
ಪಾಲಕರು ಐದು ವರ್ಷದೊಳಗಿನ ಮಕ್ಕಳನ್ನು ಕರೆ ತಂದು, ಲಸಿಕೆ ಹಾಕಿಸಬೇಕು ಎಂದು ಕೋರಿದ್ದಾರೆ.

# ಶರಣಪ್ಪ ಮಾನೇಗಾರರಿಂದ ಕ್ರೀಡಾ ಪ್ರತಿಭೆಗಳಿಗೆ ಬೆಂಬಲ: ಕೆಪಿಎಲ್ ಸೀಸನ್–4 ವಿಜೇತರಿಗೆ 50 ಸಾವಿರ ಬಹುಮಾನ



**ಸೈದಾಪೂರ:ಜೂ.26:**ಗ್ರಾಮೀಣ ಭಾಗದ ಯುವಕರಲ್ಲಿರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ ಯರಗೋಳ ಅವರು ಮತ್ತೊಮ್ಮೆ ಮಾದರಿ ಕಾರ್ಯಕ್ಕೆ ಮುಂದಾಗಿದ್ದಾರೆ. ಯಾದಗಿರಿ ತಾಲೂಕಿನ ಕಿಲ್ಲನಕೇರಾ ಗ್ರಾಮದಲ್ಲಿ ನಡೆದ ಕಿಲ್ಲನಕೇರಾ ಪ್ರಿಮಿಯರ್ ಲೀಗ್ (ಕೆಪಿಎಲ್) ಸೀಸನ್–4 ಕ್ರಿಕೆಟ್ ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಕ್ಕೆ 50 ಸಾವಿರ ಪ್ರಥಮ ಬಹುಮಾನ ನೀಡಿ ಕ್ರೀಡಾಪಟುಗಳ ಮೆಚ್ಚುಗೆಗೆ ಪಾತ್ರರಾದರು.

ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಗಣ್ಯರು, ಗ್ರಾಮೀಣ ಪ್ರದೇಶದಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರತರುವಲ್ಲಿ ಶರಣಪ್ಪ ಮಾನೇಗಾರ ಅವರು ನೀಡುತ್ತಿರುವ ನಿರಂತರ ಪ್ರೋತ್ಸಾಹ ಮತ್ತು ಸಹಕಾರ ಶ್ಲಾಘನೀಯ ಎಂದು ಹೇಳಿದರು.
ಇಂತಹ ಕ್ರೀಡಾ ಆಯೋಜನೆಗಳು ಯುವಕರಲ್ಲಿ ಆತ್ಮವಿಶ್ವಾಸ, ಶಿಸ್ತು ಹಾಗೂ ಸಾಧನೆಯ ಮನೋಭಾವ ಬೆಳೆಸಲು ಸಹಕಾರಿಯಾಗುತ್ತವೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾತನಾಡಿದ ಬಂದಪ್ಪಗೌಡ ಲಿಂಗೇರಿ ಅವರು, "ಗ್ರಾಮೀಣ ಯುವಕರಲ್ಲಿ ಕ್ರೀಡಾ ಆಸಕ್ತಿ ಹೆಚ್ಚಿಸಲು ಶರಣಪ್ಪ ಮಾನೇಗಾರ ಅವರು ನೀಡುತ್ತಿರುವ ಪ್ರೋತ್ಸಾಹ ಇತರರಿಗೆ ಮಾದರಿಯಾಗಿದೆ. ಕ್ರೀಡೆ ಯುವಕರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೂರಕವಾಗಿದ್ದು, ಇಂತಹ ಪಂದ್ಯಾವಳಿಗಳಿಗೆ ಎಲ್ಲರ ಸಹಕಾರ ಅಗತ್ಯ" ಎಂದು ಹೇಳಿದರು.

ಪ್ರಥಮ ದರ್ಜೆ ಗುತ್ತಿಗೆದಾರ ರಘುಪತಿ ಗೌಡಿಗೇರಾ ಮಾತನಾಡಿ, "ಗ್ರಾಮೀಣ ಪ್ರದೇಶದ ಯುವಕರಲ್ಲಿ ಅಪಾರ ಪ್ರತಿಭೆ ಅಡಗಿದೆ. ಇಂತಹ ಪಂದ್ಯಾವಳಿಗಳು ಕೇವಲ ಆಟದ ಕೌಶಲ್ಯವನ್ನಷ್ಟೇ ಬೆಳೆಸದೆ, ಒಗ್ಗಟ್ಟು, ನಾಯಕತ್ವ ಗುಣ ಹಾಗೂ ಸ್ನೇಹದ ಬಾಂಧವ್ಯವನ್ನು ಗಟ್ಟಿಗೊಳಿಸುತ್ತವೆ" ಎಂದರು.

ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ಅನಿಲ್ ಹೆಡಗಿಮದ್ರಿ ಅವರಿಂದ ?25 ಸಾವಿರ ನಗದು ಬಹುಮಾನ ವಿತರಿಸಲಾಯಿತು. ವಿಜೇತ ಹಾಗೂ ರನ್ನರ್‌ಅಪ್ ತಂಡಗಳಿಗೆ ಆಕರ್ಷಕ ಟ್ರೋಫಿಗಳನ್ನು ನೀಡಿ ಗೌರವಿಸಲಾಯಿತು. ಇದೇ ವೇಳೆ ಸರಣಿ ಶ್ರೇಷ್ಠ ಆಟಗಾರ, ಉತ್ತಮ ಬ್ಯಾಟ್ಸ್‌ಮನ್ ಹಾಗೂ ಉತ್ತಮ ಬೌಲರ್ ಪ್ರಶಸ್ತಿಗಳನ್ನು ಪ್ರದಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಮಾಲಿ ಪಾಟೀಲ, ಮಹಿಬೂಬ್ ಕತ್ತಣ್ಣೋರ್, ಅಬ್ದುಲ್ ಅತ್ತಾರ್, ಬನ್ನಪ್ಪ ಬಾವೂರ ಮಸಾಲಿ, ಶಿವಶರಣ ವಕೀಲರು, ವೆಂಕಟೇಶ ಅಗಸಿಮುಂದಳ್, ಭೀಮರಾಯ ಧೋತ್ರೆ, ಹುಸೇನ್ ಫೈಲ್, ಹಣಮಂತ ಬಾವೂರ ನೀಲಿ, ಬಸವರಾಜ ಗ್ಯಾರೇಜ್, ಪಿಲಿಂಗ ಅಂಬಿಗೇರ್ ಬಾವೂರ, ಪವನ ದಳಪತಿ, ಭೀಮರಾಯ ಟೆಂಗಿನಗಿಡ, ಯಂಕಪ್ಪ ಟ್ಯಾಕ್ಟರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆಯೋಜಕರಾದ ಬೀರಲಿಂಗಪ್ಪ ಕಿಲ್ಲನಕೇರಾ, ಸೈದಪ್ಪ ಬಾಂಬೆ ಗೌಡಗೇರಾ ಹಾಗೂ ಉಮೇಶ ಧೋತ್ರೆ ಅವರ ನೇತೃತ್ವದಲ್ಲಿ ನಡೆದ ಈ ಕ್ರೀಡಾ ಉತ್ಸವ ಗ್ರಾಮೀಣ ಯುವಕರಲ್ಲಿ ಹೊಸ ಉತ್ಸಾಹ ಮತ್ತು ಕ್ರೀಡಾ ಚೈತನ್ಯ ಮೂಡಿಸುವಲ್ಲಿ ಯಶಸ್ವಿಯಾಯಿತು.

# ಜೂ. 28 ರಂದು ಬಸವಾದಿ ಶಿವಶರಣರ ಹಿಂದೂ ಸಮಾವೇಶ ವಿರೋಧಿಸಿ ಪ್ರತಿಭಟನೆ : ಡಾ. ಮೀನಾಕ್ಷಿ ಬಾಳಿ




**ಬೀದರ್ :ಜೂ.26:** ಜೂ. 28 ರಂದು ಬಸವಾದಿ ಶಿವಶರಣರ ಹಿಂದೂ ಸಮಾವೇಶ ವಿರೋಧಿಸಿ ಬಸವಕಲ್ಯಾಣದಲ್ಲಿ ಜಾಗತಿಕ ಲಿಂಗಾಯತ ಮಹಾಸಭೆ, ಸೌಹಾರ್ದ ಕರ್ನಾಟಕ, ಪ್ರಗತಿಪರ ಸಂಘಟನೆಗಳ ಒಕ್ಕೂಟದ ಅಡಿಯಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಗತಿಪರ ಚಿಂತಕಿ ಡಾ. ಮೀನಾಕ್ಷಿ ಬಾಳಿ ಅವರು ಹೇಳಿದರು.
ನಗರದ ಪತ್ರಿಕಾ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಅಂತರ್ಜಾತಿ ವಿವಾಹ ಏರ್ಪಡಿಸಿದ್ದರಿಂದ ಅಂದಿನ ವೈದಿಕರು, ಸನಾತನಗಳು ಬಸವಣ್ಣನವರನ್ನು ಗಡಿಪಾರು ಶಿಕ್ಷೆಗೆ ಒಳಪಡಿಸಿದರು. ಎಲ್ಲ ಶರಣರನ್ನು ಕಗ್ಗೊಲೆ ಮಾಡಿದರು. ವಚನಗಳು ನಿರ್ನಾಮ ಮಾಡಿದರು. ಇವಾಗ ಅದೇ ಸನಾತನವಾದಿಗಳು ಬಸವಾದಿ ಶರಣರ ಮುಖವಾಡ ಹಾಕಿಕೊಂಡು ಬಂದು ಬಸವಾದಿ ಶಿವಶರಣರ ಹಿಂದೂ ಸಮಾವೇಶ ಮಾಡುತ್ತಿದ್ದಾರೆ ಎಂದು ಕಿಡಿ ಕಾರಿದರು.

ಇದೀಗ ಬಸವಕಲ್ಯಾಣದಲ್ಲಿ ಜೂ. 28ರಂದು ಬಸವಾದಿ ಶಿವಶರಣರ ಹಿಂದೂ ಸಮಾವೇಶ ನಡೆಸಲಾಗುತ್ತಿದೆ. ಒಂದೇ ಒಂದು ಸಲ ಬಸವಣ್ಣನವರ ಹೆಸರು ಹೇಳಲು ಬಯಸದ ಇವರು ಹಿಂದೂ ಸಮಾವೇಶದ ಹಿಂದೆ ಬಸವಾದಿ ಶಿವಶರಣರ ಹೆಸರು ಬಳಸುತ್ತಿರುವುದು ನಾವು ಖಂಡಿಸುತ್ತೇವೆ. ಜೂ. 28ರಂದು ನಾವು ಬಸವಕಲ್ಯಾಣದಲ್ಲಿ ನಾವು ತಾತ್ವಿಕ ಹೋರಾಟದ ಮಾಡುವ ಮೂಲಕ ಧಿಕ್ಕರಿಸುತ್ತೇವೆ ಎಂದು ಎಚ್ಚರಿಸಿದರು.

ಪ್ರಗತಿಪರ ಚಿಂತಕರಾದ ಪ್ರೊ. ಆರ್. ಕೆ ಹುಡಗಿ ಅವರು ಮಾತನಾಡಿ, ಆರ್ ಎಸ್ ಎಸ್ ಸಂಘಿ ಗ್ಯಾಂಗ್ ನವರು ಲಿಂಗಾಯತ ಧರ್ಮದ ಬೆನ್ನು ಬಿದ್ದಿರುವುದಕ್ಕೆ ಕಾರಣ ಏನೆಂದರೆ ಭಾರತದಲ್ಲಿಯೇ ಆರ್ ಎಸ್ ಎಸ್ ಗೆ ವಿರೋಧಿಸುವ ಧರ್ಮ ಎಂದರೆ ಅದು ಲಿಂಗಾಯತ ಧರ್ಮವಾಗಿದೆ. ಹಾಗಾಗಿ ಇದನ್ನು ಮಟ್ಟ ಹಾಕಲು ಆರ್ ಎಸ್ ಎಸ್ ಸಂಘಿ ಗ್ಯಾಂಗ್ ನವರು ಹಿಂದೆ ಬಿದ್ದಿದ್ದಾರೆ ಎಂದರು.

ಪ್ರಗತಿಪರ ಚಿಂತನಕಾರ್ತಿ ಕೆ. ನೀಲಾ ಅವರು ಮಾತನಾಡಿ, ಲಿಂಗಾಯತ ಎನ್ನುವುದು ಒಂದು ಸಮಾನತೆ ಸಾರುವ ತತ್ವವಾಗಿದ್ದು, ಅದು ಜಾತಿಯಲ್ಲ. ಅದೇ ಸಮಾನತೆಯ ತತ್ವ ಅವರಿಗೆ ನುಂಗಲಾರದ ತುತ್ತಾಗಿದೆ. ಅದಕ್ಕಾಗಿ ಅವರು ವೇಷ ಧರಿಸಿ ಅದನ್ನು ನಾಶ ಮಾಡಲು ಹೊರಟಿದ್ದಾರೆ. ಲಿಂಗಾಯತ ಪ್ರತ್ಯಕ ಸ್ವತಂತ್ರ ಧರ್ಮ ಆಗುವುದಕ್ಕೆ ಬಿಡುವುದಿಲ್ಲ ಎಂದು ಸಂತೋಷ್ ಜಿ. ಅವರು ಹೇಳುತ್ತಾರೆ. ಇದನ್ನು ಕನ್ನೇರಿ ಸ್ವಾಮಿ ಅವರು ಧಿಕ್ಕರಿಸುತ್ತಾರಾ ಎಂದು ಪ್ರಶ್ನೆ ಮಾಡಿದರು.
ಈ ಸಂದರ್ಭದಲ್ಲಿ ಮಾರುತಿ ಗೋಖಲೆ, ಶಶಿಕಾಂತ್, ಸಾವಿತ್ರಿ, ಬಸವರಾಜ್ ಮಾಳಗೆ, ಗೌಸುದ್ದೀನ್, ರಾಜಾಸಾಬ್, ಟಿ. ಧನರಾಜ್ ಹಾಗೂ ಶಶಿಕಾಂತ್ ಸೇರಿದಂತೆ ಇತರರು ಇದ್ದರು.

# ಮಕ್ಕಳು ಬಿಸಿಲಿನಲ್ಲಿ ಕುಳಿತು ಪಾಠ ಕೇಳುವ ಪರಿಸ್ಥಿತಿ; ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಹೋರಾಟದ ಎಚ್ಚರಿಕೆ

**ಯಾದಗಿರಿ:ಜೂ.26:**ವಡಗೇರಾ ತಾಲೂಕಿನ ಗುಂಡಗುರ್ತಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಗಳ ದುರಸ್ತಿ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದ್ದು, ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ದೋಷಗಳು ಕಾಣಿಸಿಕೊಂಡಿವೆ ಎಂದು ಆರೋಪಿಸಿರುವ ನಮ್ಮ ಕರ್ನಾಟಕ ಸೇನೆ (ನಕಸೇ), ಕಾಮಗಾರಿಯ ಬಿಲ್ ತಡೆಹಿಡಿದು ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ ಆಗ್ರಹಿಸಿದೆ.

ಈ ಕುರಿತು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಗೆ ಮನವಿ ಸಲ್ಲಿಸಿರುವ ನಕಸೇ ವಡಗೇರಾ ತಾಲೂಕು ಯುವ ಘಟಕದ ಪದಾಧಿಕಾರಿಗಳು, ಗುಂಡಗುರ್ತಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ದುರಸ್ತಿ ಕಾಮಗಾರಿಯನ್ನು ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲಾಗುತ್ತಿದ್ದು, ಆರಂಭದಿಂದಲೇ ಕಾಮಗಾರಿಯಲ್ಲಿ ನಿರ್ಲಕ್ಷ್ಯ ಹಾಗೂ ಕಳಪೆ ಗುಣಮಟ್ಟ ಕಂಡುಬರುತ್ತಿದೆ ಎಂದು ದೂರಿದ್ದಾರೆ.

ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದ್ದು, ಪೂರ್ಣಗೊಳ್ಳುವ ಮೊದಲೇ ಮೇಲ್ಛಾವಣಿ ಬಿರುಕು ಬಿಟ್ಟು ಕಿತ್ತುಬರುವ ಸ್ಥಿತಿ ನಿರ್ಮಾಣವಾಗಿದೆ. ಕಾಮಗಾರಿಯಲ್ಲಿ ಗುಣಮಟ್ಟದ ಸಾಮಗ್ರಿಗಳನ್ನು ಬಳಸಿಲ್ಲ, ಸಮರ್ಪಕವಾಗಿ ಕ್ಯೂರಿಂಗ್ ಮಾಡಿಲ್ಲ ಹಾಗೂ ಕಳಪೆ ಪ್ರಮಾಣದ ವಸ್ತುಗಳನ್ನು ಬಳಸಲಾಗಿದೆ ಎಂದು ಸಂಘಟನೆ ಆರೋಪಿಸಿದೆ.

ಅಲ್ಲದೆ, ಶಾಲೆಯ ಕಿಟಕಿ–ಬಾಗಿಲುಗಳನ್ನು ಹೊಸದಾಗಿ ಅಳವಡಿಸದೆ ಹಳೆಯವನ್ನೇ ಮುಂದುವರಿಸಲಾಗಿದೆ. ನೆಲದ ಟೈಲ್ಸ್ ಅಳವಡಿಸುವ ಸಂದರ್ಭದಲ್ಲಿಯೂ ನಿಯಮಾನುಸಾರ ಕಂಕರ್, ಸಿಮೆಂಟ್ ಬಳಕೆ ಮಾಡದೆ ಕಳಪೆ ಕಾಮಗಾರಿ ನಡೆಸಿರುವ ಪರಿಣಾಮ ಟೈಗಳು ಕಿತ್ತುಬರುವ ಸ್ಥಿತಿ ನಿರ್ಮಾಣವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಗೋಡೆಗಳಿಗೆ ಸಮರ್ಪಕ ಪ್ಲಾಸ್ಟರಿಂಗ್ ಮಾಡದೇ ಕೇವಲ ಬಣ್ಣ ಬಳಿಯಲಾಗಿದೆ. ಮೇಲ್ಛಾವಣಿಯ ಸಮಸ್ಯೆಯಿಂದ ಕಳೆದ ಹತ್ತು ದಿನಗಳಿಂದ ಮಕ್ಕಳು ತರಗತಿ ಕೊಠಡಿಗಳ



ಬದಲು ಹೊರಗಡೆ ಬಿಸಿಲಿನಲ್ಲಿ ಕುಳಿತು ಪಾಠ ಕೇಳುವಂತಾಗಿದೆ. ಮಳೆ ಆರಂಭವಾದರೆ ವಿದ್ಯಾರ್ಥಿಗಳ ಸುರಕ್ಷತೆ ಪ್ರಶ್ನಾರ್ಹವಾಗಲಿದೆ ಎಂದು ಸಂಘಟನೆ ಆತಂಕ ವ್ಯಕ್ತಪಡಿಸಿದೆ.

ಕಾಮಗಾರಿ ಅಂದಾಜು ಪತ್ರಿಕೆಯ ಪ್ರಕಾರ ಹಾಗೂ ನಿಯಮಾನುಸಾರ ನಡೆಯುವಂತೆ ಹಲವು ಬಾರಿ ಮನವಿ ಮಾಡಿದರೂ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿರುವ ನಕಸೇ, ತಕ್ಷಣ ಸ್ಥಳ ಪರಿಶೀಲನೆ ನಡೆಸಿ ಗುಣಮಟ್ಟದ ಕಾಮಗಾರಿ ಮಾಡಿಸುವಂತೆ ಒತ್ತಾಯಿಸಿದೆ.

ಒಂದು ವಾರದೊಳಗೆ ಸಮಸ್ಯೆ ಪರಿಹರಿಸಿ ಸುಸಜ್ಜಿತ ಶಾಲಾ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳದಿದ್ದರೆ ಸಂಬಂಧಿಸಿದ ಇಲಾಖೆಗೆ ಮುತ್ತಿಗೆ ಹಾಕಿ ಹೋರಾಟ ನಡೆಸಲಾಗುವುದು ಎಂದು ಸಂಘಟನೆ ಎಚ್ಚರಿಕೆ ನೀಡಿದೆ.

ಈ ಸಂದರ್ಭದಲ್ಲಿ ನಕಸೇ ತಾಲೂಕು ಯುವ ಘಟಕದ ಅಧ್ಯಕ್ಷ ರಾಜು ಬಿ. ಮ್ಯಾಗಿನಮನಿ ಗುಂಡಗುರ್ತಿ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಕು. ಶ್ರೀದೇವಿ ಕಟ್ಟಿಮನಿ, ರಂಗನಾಥ, ಮೋಹನಕುಮಾರ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಹಿರಿಯ ನಾಗರಿಕರ ಹಕ್ಕುಗಳ ರಕ್ಷಣೆಗೆ ಕಾನೂನು ಅರಿವು ಅಗತ್ಯ

**ಯಾದಗಿರಿ: ಜೂ.26:**ಹಿರಿಯ ನಾಗರಿಕರ ಗೌರವಯುತ ಬದುಕು, ಹಕ್ಕುಗಳ ರಕ್ಷಣೆ ಹಾಗೂ ಪೋಷಕರ ಮೇಲಿನ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವ ಉದ್ದೇಶದಿಂದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಯಾದಗಿರಿ ವತಿಯಿಂದ ನಗರದ ಗಾಂಧಿ ಚೌಕ್‌ನಲ್ಲಿರುವ ಅಂಕಿತಾ ಮಹಿಳಾ ಮಂಡಳಿ ವೃದ್ಧಾಶ್ರಮದಲ್ಲಿ "ಪೋಷಕರು ಹಾಗೂ ಹಿರಿಯ ನಾಗರಿಕರ ಕಲ್ಯಾಣ ಮತ್ತು ಪೋಷಣೆ ಕಾಯ್ದೆ" ಕುರಿತು ವಿಶೇಷ ಕಾನೂನು ಅರಿವು–ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಮರಿಯಪ್ಪ ಅವರು ಉದ್ಘಾಟಿಸಿದರು.

ಉದ್ಘಾಟನಾ ಭಾಷಣದಲ್ಲಿ ಮಾತನಾಡಿದ ಅವರು, ಹಿರಿಯ ನಾಗರಿಕರು ಕುಟುಂಬದ ಅನುಭವದ ಆಧಾರಸ್ತಂಭಗಳಾಗಿದ್ದು, ಅವರ ರಕ್ಷಣೆ, ಪೋಷಣೆ ಮತ್ತು ಗೌರವಯುತ ಜೀವನ ಕಲ್ಪಿಸುವುದು ಪ್ರತಿಯೊಬ್ಬರ ನೈತಿಕ ಹಾಗೂ ಸಾಮಾಜಿಕ ಕರ್ತವ್ಯವಾಗಿದೆ ಎಂದು ಹೇಳಿದರು.

ಪೋಷಕರು ಹಾಗೂ ಹಿರಿಯ ನಾಗರಿಕರ ಕಲ್ಯಾಣ ಮತ್ತು ಪೋಷಣೆ ಕಾಯ್ದೆಯಡಿ ಹಿರಿಯರಿಗೆ ದೊರೆಯುವ ಕಾನೂನು ಹಕ್ಕುಗಳು, ರಕ್ಷಣಾ ವ್ಯವಸ್ಥೆಗಳು ಹಾಗೂ ಸರ್ಕಾರದ ಸೌಲಭ್ಯಗಳ ಕುರಿತು ವಿವರಿಸಿದ ಅವರು, ಅಗತ್ಯವಿರುವವರು ಕಾನೂನು ಸೇವೆಗಳ ಪ್ರಾಧಿಕಾರದ ಮೂಲಕ ಉಚಿತ ಕಾನೂನು ನೆರವನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು.
ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ವೀಣಾ ಮೋದಿ ಅವರು ವಹಿಸಿದ್ದರು. ಈ



ಸಂದರ್ಭದಲ್ಲಿ ಮಾತನಾಡಿದ ಅವರು, ಹಿರಿಯ ನಾಗರಿಕರ ಸೇವೆ ಮತ್ತು ಕಲ್ಯಾಣವು ಕೇವಲ ಕುಟುಂಬದ ಜವಾಬ್ದಾರಿಯಲ್ಲ, ಇಡೀ ಸಮಾಜದ ಹೊಣೆಗಾರಿಕೆಯಾಗಿದೆ. ಹಿರಿಯರನ್ನು ಗೌರವಿಸುವ ಸಂಸ್ಕೃತಿ ನಮ್ಮ ಸಮಾಜದ ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರ ಸಮಸ್ಯೆಗಳು, ಕಾನೂನು ರಕ್ಷಣೆ, ಹಕ್ಕುಗಳ ಬಳಕೆ, ಕುಟುಂಬದ ಜವಾಬ್ದಾರಿಗಳು ಹಾಗೂ ಸಮಾಜದಲ್ಲಿ ಹಿರಿಯರಿಗೆ ನೀಡಬೇಕಾದ ಗೌರವದ ಕುರಿತು ಸಮಗ್ರ ಮಾಹಿತಿ ನೀಡಲಾಯಿತು.

ಹಿರಿಯ ನಾಗರಿಕರ ಬದುಕಿನಲ್ಲಿ ಭದ್ರತೆ, ಆತ್ಮವಿಶ್ವಾಸ ಮತ್ತು ಕಾನೂನು ಅರಿವು ಮೂಡಿಸುವ ನಿಟ್ಟಿನಲ್ಲಿ ನಡೆದ ಈ ಕಾರ್ಯಕ್ರಮವು ಮಹತ್ವದ ಹೆಜ್ಜೆಯಾಗಿದೆ ಎಂದು ತಿಳಿಸಲಾಯಿತು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE